MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

YUVA MARGA KANNADA DAILY NEWS PAPER

| ಸಂಪುಟ: 05 | ಸಂಚಿಕೆ: 78 | ಶುಕ್ರವಾರ : 09-01-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00 |
|---|---|---|---|---|---|---|
| VOLUME: 05 | ISSUE: 78 | FRIDAY : 09-01-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00 |


## ಅಕ್ರಮ ಮದ್ಯ ಮಾರಾಟ ಕ್ರಮಕ್ಕೆ ಒತ್ತಾಯ



ಯುವಮಾರ್ಗ ಸುದ್ದಿ

**ಲಿಂಗಸಗೂರು,ಜ.8–** ತಾಲುಕಿನ ಈಚನಾಳ, ಈಚನಾಳ ಕ್ರಾಸ್, ಈಚನಾಳ ತಾಂಡಾದ ಗ್ರಾಮಗಳ ಹಲವು ಕಡೆ ಪಾನ್ ಬೀಡಾ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದು, ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಈಚನಾಳ ಗ್ರಾಮ ಪಂಚಾಯತ ಮುಂಭಾಗದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಯಂಕಮ್ಮ ಮೇಟಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಅಬಕಾರಿ ಸರ್ಕಲ್ ಇನ್ಸಪೆಕ್ಟರ್ ಲಕ್ಷ್ಮಿ ದೇವಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು . (2ನೇ ಪುಟಕ್ಕೆ>>>)

## ಬಳ್ಳಾರಿ ಗಲಭೆ ಸಿಬಿಐ ತನಿಖೆಯಿಲ್ಲ

**ಬೆಂಗಳೂರು, ಜ. 8–** ಬಳ್ಳಾರಿ ಗಲಭೆ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂಬ ಬೇಡಿಕೆಗಳನ್ನು ತಳ್ಳಿ ಹಾಕಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಈ ಬಗ್ಗೆ ಸಿಬಿಐ ತನಿಖೆ ಅಗತ್ಯವಿಲ್ಲ, ಸಿಬಿಐ ತನಿಖೆಗೆ ಕೊಡಲ್ಲ ಎಂದು ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪೊಲೀಸರೇ ತನಿಖೆ ನಡೆಸುವ ಸಾಮರ್ಥ್ಯ ಹೊಂದಿದ್ದಾರೆ. ಅವರು ಎಲ್ಲವನ್ನು ನಿಭಾಯಿಸುವ ಶಕ್ತಿ ಹೊಂದಿದ್ದಾರೆ. ಅವರ ಕೈಯಲ್ಲಿ ಆಗಲ್ಲ ಎಂಬ ಸಂದರ್ಭ ಬಂದರೆ ನಾವು ಸಿಬಿಐಗೆ ಕೊಡಬಹುದು. ಆದರೆ, ಅಂಥ ಸಂದರ್ಭ ಇಲ್ಲ. ಹಾಗಾಗಿ ಸಿಬಿಐ ತನಿಖೆ ಅಗತ್ಯವಿಲ್ಲ ಎಂದರು. ನಾವು ಯಾವುದೇ ಪ್ರಕರಣಗಳನ್ನು ಸಿಬಿಐಗೆ ಕೊಡಲ್ಲ ಎಂಬ ನಿರ್ಧಾರಗಳನ್ನು ಸಚಿವ ಸಂಪುಟದಲ್ಲಿ ಮಾಡಿದ್ದೇವೆ. ಆಯ್ದ ಸಂದರ್ಭಗಳಲ್ಲಿ ಮಾತ್ರ ನಾವು ಈ ಬಗ್ಗೆ ತೀರ್ಮಾನಿಸುತ್ತೇವೆ. ಆದರೆ, ಬಳ್ಳಾರಿ ಗಲಭೆ ಬಗ್ಗೆ ಸಿಬಿಐ ತನಿಖೆ ಅಗತ್ಯವಿಲ್ಲ, ಸಿಬಿಐಗೆ ಕೊಡಲ್ಲ ಎಂದು ಎರಡೆರಡು ಬಾರಿ ಹೇಳಿದರು.

ಒಂದು ವೇಳೆ ನ್ಯಾಯಾಲಯದ ಆದೇಶ ಮತ್ತಿತರ ಸಂದರ್ಭ ಬಂದಾಗ ಮಾತ್ರ ನಾವು ಸಿಬಿಐಗೆ ಕೊಡುವ ಬಗ್ಗೆ ತೀರ್ಮಾನ ಮಾಡುತ್ತೇವೆ. ಸಚಿವ ಸಂಪುಟದಲ್ಲಿ ಯಾವುದೇ ಪ್ರಕರಣ ಸಿಬಿಐಗೆ ಕೊಡಬಾರದೆಂಬ ತೀರ್ಮಾನ ಆಗಿದೆ. ಬಳ್ಳಾರಿ ಗಲಾಟೆ



ಬಗ್ಗೆಯೂ ಸಿಬಿಐ ತನಿಖೆಗೆ ಕೊಡುವ ಅಗತ್ಯತೆ ಇಲ್ಲ ಎಂದರು.

**ರಾಜಕೀಯ ಹೇಳಿಕೆ–** ಹುಬ್ಬಳ್ಳಿಯಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿದ ಘಟನೆಗೆ ಸಂಬಂಧಿಸಿದಂತೆ ಹುಬ್ಬಳ್ಳಿ ಪೊಲೀಸ್ ಆಯುಕ್ತ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದಾರೆ. ಅದು ಸಾಕು ಎಂದು ನನಗೆ ಅನಿಸುತ್ತದೆ. ಆ ಬಗ್ಗೆ ನಾನು ಹೆಚ್ಚಿನದೇನು ಪ್ರತಿಕ್ರಿಯಿಸಲ್ಲ. ಎಲ್ಲದರಲ್ಲೂ ರಾಜಕೀಯ ಮಾಡುವುದು ಸರಿಯಲ್ಲ (2ನೇ ಪುಟಕ್ಕೆ>>>)

## ಪದೋನ್ನತಿ ಹೊಂದಿದ ಎ.ಎಸ್.ಐ. ಸೂಗಪ್ಪ ಕಾಡ್ಲೂರ ರವರಿಗೆ ಜಯನಗರ ನಿವಾಸಿಗಳಿಂದ ಗೌರವ ಸನ್ಮಾನ

ಯುವಮಾರ್ಗ ಸುದ್ದಿ



**ಮಾನ್ವಿ ,ಜ.8–** ಪಟ್ಟಣದ ಜಯನಗರದಲ್ಲಿನ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನದ ಆವರಣದಲ್ಲಿ ಜನಯನಗರದ ನಿವಾಸಿಗಳಾದ ಮಾನ್ವಿ ಪೊಲೀಸ್ ಠಾಣೆಯ ಎ.ಎಸ್.ಐ. ಸೂಗಪ್ಪ ಕಾಡ್ಲೂರ ರವರನ್ನು ವಾರ್ಡಿನ ನಿವಾಸಿಗಳು ಹಾಗೂ ಶ್ರೀ ಬಸವೇಶ್ವರ ಯುವಕ ಮಂಡಳಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಹಿರಿಯ ವಕೀಲರಾದ ಸಿದ್ದಲಿಂಗಪ್ಪ ಮಾತನಾಡಿ ಮಾನ್ವಿ ಪೊಲೀಸ್ ಠಾಣೆಯಲ್ಲಿ ಬಹು ವರ್ಷಗಳಿಂದ ಉತ್ತಮ ಸೇವೆಸಲ್ಲಿಸಿ ಎ.ಎಸ್.ಐ.ಆಗಿ ಸೂಗಪ್ಪ ಕಾಡ್ಲೂರ ರವರು ಪದೋನ್ನತಿ ಹೊಂದಿರುವುದು ಅತ್ಯಂತ ಸಂತೋಷದ ವಿಷಯವಾಗಿದ್ದು ಅವರು ತಮ್ಮ ವೃತ್ತಿ ಜೀವನದಲ್ಲಿ ಸಾರ್ವಜನಿಕರಿಗೆ ಪೊಲೀಸ್ ಇಲಾಖೆಯಿಂದ ಹೆಚ್ಚಿನ ಸೇವೆಯನ್ನುಸಲ್ಲಿಸಿ ಉನ್ನತ ಹುದ್ದೆಗಳನ್ನು ಪಡೆಯಲಿ ಎಂದು ಆಶಿಸಿದರು.


ಜಯನಗರ ವಾರ್ಡಿನ ಪ್ರಮುಖರಾದ ಸಂಗಪುರ ಕಿದ್ಮತ್ ಹಿರೇಮಠದ ಶ್ರೀ ವೀರಭದ್ರಯ್ಯಸ್ವಾಮಿಗಳು,ರಾಮಣ್ಣ ನಾಯಕ, ರಾಜಶೇಖರಯ್ಯಸ್ವಾಮಿ, ಶಿವಕುಮಾರ ಪಾಟೀಲ್, ದೇವರೆಡ್ಡಿ, ಚನ್ನಬಸವ ಕೋಡ್ಲಿ, ಲಿಂಗರಾಜ ಗಡಿಗಿ, ಈರಣ್ಣನಾಯಕ, ಸಿದ್ದಯ್ಯ ಕಳ್ಳಿಮಠ,ಅಮರೇಶಸಾಲಿಮಠ ಗಾವಾಯಿಗಳು, ಅಮರೇಶನಾಯಕ ಸೇರಿದಂತೆ ಇನ್ನಿತರರು ಇದ್ದರು.

## ಸಿಂಧನೂರು ಜಿಲ್ಲೆಯಾಗಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ: ಡಾ.ಬಿ.ಎನ್.ಪಾಟೀಲ್

ಯುವಮಾರ್ಗ ಸುದ್ದಿ

**ಸಿಂಧನೂರು,ಜ.8–** ಭೌಗೋಳಿಕವಾಗಿ, ಶೈಕ್ಷಣಿಕ ವಾಗಿ, ಆರ್ಥಿಕವಾಗಿ, ಜನಸಂಖ್ಯೆಯಲ್ಲಿ, ಅಭಿವೃದ್ಧಿ ಯಲ್ಲಿ, ಕೃಷಿಯಲ್ಲಿ, ಕೈಗಾರಿಕೆಗಳು, ವಿವಿಧ ಕಛೇರಿ ಗಳು, ಪ್ರಾರಂಭವು ಸೇರಿದಂತೆ ಬಹಳ ಮುಂದು ವರೆದ ಪ್ರದೇಶವಾಗಿದೆ. ಸಿಂಧನೂರು ತಾಲೂಕು, ಜಿಲ್ಲಾ ಕೇಂದ್ರವಾಗಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ ಎಂದು ಡಾ.ಬಿ.ಎನ್.ಪಾಟೀಲ್ ಹೇಳಿದರು.

ಗುರುವಾರ ನಗರದ ಟೌನ್ ಹಾಲ್ ನಲ್ಲಿ ಸಿಂಧ ನೂರು ಜಿಲ್ಲಾ ಹೋರಾಟ ಸಮಿತಿಯಿಂದ ಹಮ್ಮಿಕೊ ಳ್ಳಲಾದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷಾತೀತವಾಗಿ ರಾಜಕೀಯ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾ ರಿಗಳು, ಎಪಿಎಂಸಿ ವರ್ತಕರ ಸಂಘದವರು, ಕನ್ನಡ ಸಾಹಿತ್ಯ ಪರಿಷತ್ತು, ಸಮುದಾಯದ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ವಕೀಲರ



ಸಂಘ, ಪತ್ರಕರ್ತರ ಸಂಘದ ಮುಖಂಡರು ಆದಿಯಾಗಿ, ಪ್ರತಿಯೊಬ್ಬರು ಭಾಗವಹಿಸಿ ಸಿಂಧನೂರು ತಾಲೂಕನ್ನ ಜಿಲ್ಲಾ ಕೇಂದ್ರವನ್ನಾಗಿಸಲು ಪ್ರತಿಯೊಬ್ಬರು ಸತತ ಪ್ರಯತ್ನ ಮಾಡೋಣ ಎಂದರು.

ರಾಜಶೇಖರ ಪಾಟೀಲ್ ಮಾತನಾಡಿ, ಜಿಲ್ಲಾಯಾಗಲು ಬೇರೆ ತಾಲೂಕುಗಳ ಜೊತೆಗೆ ಈ ತಾಲೂಕಿನಲ್ಲಿರುವ ಯಾವ ಊರುಗಳನ್ನು ತಾಲೂಕು ಮಾಡಬಹುದು ಎಂಬುದರ ಬಗ್ಗೆ ಆಲೋಚನೆ ಮಾಡಿ ತುರ್ವಿಹಾಳ ಪಟ್ಟಣ ಪಂಚಾಯತಿಯಿರುವ ಊರು ಜನಸಂಖ್ಯೆ ಜಾಸ್ತಿ ಇದೆ, ಶಾಲಾ ಕಾಲೇಜುಗಳಿವೆ, ನಾಡಕಛೇರಿ ಇದೆ, ಆರ್ಥಿಕ ಮತ್ತು ಭೌಗೋಳಿಕವಾಗಿ (2ನೇ ಪುಟಕ್ಕೆ>>>)

## ರಾಯಚೂರು ಉತ್ಸವ ಮನೆಮನೆಯ ಉತ್ಸವವಾಗಲಿ: ಗಣ್ಯ ಮಹನಿಯರ ಸಲಹೆ

ಯುವಮಾರ್ಗ ಸುದ್ದಿ

**ರಾಯಚೂರು,ಜ.8–** ಎಡೆದೊರೆ ನಾಡು ರಾಯಚೂರು ಉತ್ಸವ–2026 ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಇದು ಐತಿಹಾಸಿಕ ಪ್ರಯತ್ನ. ಜಿಲ್ಲಾಡಳಿತಕ್ಕೆ ಧನ್ಯವಾದಗಳು. ನಮ್ಮೂರಲ್ಲೂ ಉತ್ಸವ ಯಾವಾಗ ಆಗುತ್ತದೆ ಎಂದು ಕಾಯುತ್ತಿದ್ದೆವು. ಈದೀಗ ಆ ಕಾಲ ಕೂಡಿ ಬಂದಿದ್ದು ನಮ್ಮ ಪುಣ್ಯ. ಇದು ಮನೆಮನೆಯ ಉತ್ಸವ ಆಗಬೇಕು. ಜಿಲ್ಲಾಡಳಿತವು ಅರ್ಥಪೂರ್ಣ ಕಾರ್ಯಕ್ಕೆ ಮುಂದಾಗಿದೆ ಎನ್ನುವ ಅಭಿನಂದನಾರ್ಹ ಸಲಹೆಗಳು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಜನವರಿ 08ರಂದು ನಡೆದ ರಾಯಚೂರು ಉತ್ಸವದ ಪೂರ್ವಭಾವಿ ಸಭೆಯಲ್ಲಿ ಕೇಳಿಬಂದವು.

ಜಿಪಂ ಸಭಾಂಗಣದಲ್ಲಿ ನಡೆದ ಅಸಾಹಿತಿಗಳು, ಸಂಘ ಸಂಸ್ಥೆಗಳು, ವ್ಯಾಪಾರಸ್ಥರು, ಬುದ್ದಿಜೀವಿಗಳು, ಮಹಿಳಾ ಪ್ರಮುಖರು, ಹೋರಾಟಗಾರರ ಸಮ್ಮುಖದಲ್ಲಿ ಸಭೆಯಲ್ಲಿ ಮೊದಲಿಗೆ ಅಪರ ಜಿಲ್ಲಾಧಿಕಾರಿಗಳು ಉತ್ಸವದ ರೂಪುರೇಷಗಳ ಬಗ್ಗೆ ತಿಳಿಸಿದರು.

ಈ ವೇಳೆ ಜಿಲ್ಲೆಯ ಬೇರೆ ಬೇರೆ ಗಣ್ಯಮಹನಿಯರು ಮಾತನಾಡಿ ಉತ್ಸವಕ್ಕೆ ನಾನಾ ಸಲಹೆ ನೀಡಿದರು. ಇದು ಮನೆಮನೆಗಳ ಉತ್ಸವಾಗಲಿ ಎಂದು ಕನ್ನಡಪರ ಸಂಘಟನೆಯ ಸಿ.ಕೆ.ಜೈನ್ ಸಲಹೆ ಮಾಡಿದರು. ಎಲ್ಲರ ನೆನಪಿನಲ್ಲಿ ಉಳಿಯುವಂತಹ ಕಾರ್ಯಕ್ರಮ ಇದಾಗಲಿ ಎಂದು

ಕರ್ನಾಟಕ ಸಂಘದ ಶ್ರೀನಿವಾಸ ತಿಳಿಸಿದರು. ಐತಿಹಾಸಿಕ ಕರ್ನಾಟಕ ಸಂಘದಿಂದ ಉತ್ಸವದ ಮೆರವಣಿಗೆ ಆರಂಭಿಸಬೇಕು. ಸ್ಮರಣ ಸಂಚಿಕೆ ಪ್ರಕಟಿಸಬೇಕು ಎಂದು ಕನ್ನಡಪರ ಹೋರಾಟಗಾರಾದ ಮುರಳೀಧರ ಸಲಹೆ ಮಾಡಿದರು. ಹಳ್ಳಿಹಳ್ಳಿಗಳಿಂದ ಬಸ್ಸಗಳ ವ್ಯವಸ್ಥೆ ಮಾಡಿ ಜನ ಸೇರಲು ಅನುಕೂಲ ಕಲ್ಪಿಸಿ, ಇದನ್ನು ಜನೋತ್ಸವ ಮಾಡಬೇಕು ಎಂದು ಹೋರಾಟಗಾರರಾದ ವಿನೋದ ರೆಡ್ಡಿ ಅವರು ಸಲಹೆ ಮಾಡಿದರು. ಇದು ನಮ್ಮ ಕಾರ್ಯಕ್ರಮ. ಎಲ್ಲರೂ ನೋಡಿ ಮೆಚ್ಚುವಂತೆ ಈ ಉತ್ಸವ ಮಾಡೋಣ. ಹಂಪಿ ಉತ್ಸವ, ಕರಾವಳಿ ಉತ್ಸವ, ಲಕ್ಕುಂಡಿ ಉತ್ಸವ, ಬನವಾಸಿ ಉತ್ಸವ, ಕಿತ್ತೂರ ಉತ್ಸವ ರೀತಿ ಇನ್ಮೇಲೆ ರಾಯಚೂರು ಉತ್ಸವವು ಪ್ರತಿ ವರ್ಷ ನಡೆಯಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ ಶಾಂತಪ್ಪ ಸಲಹೆ ಮಾಡಿದರು.

ಜಿಲ್ಲೆಯ ಎಲ್ಲ ಕಲಾವಿದರಿಗೆ ಉತ್ಸವದಲ್ಲಿ ಅವಕಾಶ ಸಿಗಬೇಕು ಎಂದು ಕನ್ನಡ ಜಾಗೃತಿ ಸಮಿತಿಯ ಸದಸ್ಯರು ಸಲಹೆ ಮಾಡಿದರು.

ಉತ್ಸವದಲ್ಲಿ ರಾಯಚೂರು ಹಿರಿಯ ಮಹನಿಯರ ಪರಿಚಯದ ಭಾವಚಿತ್ರ ಅಳವಡಿಸಲು ಬಹುಜನ ಸಂಘಟನೆಯ ಜೈಭೀಮ ಸಲಹೆ ಮಾಡಿದರು.ಉತ್ಸವದಲ್ಲಿ ಎಲ್ಲರಿಗೂ ಅವಕಾಶ ನೀಡಬೇಕು. ಉತ್ಸವವನ್ನು ಪ್ರತಿ ವರ್ಷ ನಡೆಸಬೇಕು ಎಂದು ನರೇಂದ್ರ ಅವರು ಸಲಹೆ ಮಾಡಿದರು.ಜಿಲ್ಲೆಯಲ್ಲಿ ಬಹಳಷ್ಟು ಜಿಮ್ ಇದ್ದು, ಬಾಲಿಬಿಲ್ಡರಗಳ ಸ್ಪರ್ಧೆ ಆಯೋಜನೆ ಮಾಡಬೇಕು ಎಂದು ಪತ್ರಕರ್ತರಾದ ಕೆ.ಸತ್ಯನಾರಾಯಣ ಹಾಗೂ ಬಾಡಿ ಬಿಲ್ಡರ್ ಅಶೋಸಿಯೇಶನ್ ಸಂಘದ ಸುಧಾಕರ ಅವರು ಸಲಹೆ ಮಾಡಿದರು. ಬಾಡಿ ಬಿಲ್ಡರ್ ಕಿರಣ್ ವಾಲ್ಮಿಕಿ ಅವರಿಗೆ ಆಹ್ವಾನಿಸಬೇಕು ಎಂದು ಸಿ.ಕೆ.ಜೈನ್ ತಿಳಿಸಿದರು.

ರಾಯಚೂರು ಜಿಲ್ಲೆಯ ಪತ್ರಿಕಾ ಇತಿಹಾಸದ ಬಗ್ಗೆ ವಿಚಾರಗೋಷ್ಠಿ ನಡೆಸಲು ಹಿರಿಯ ಪತ್ರಕರ್ತರಾದ ಗುರುನಾಥ ಅವರು ಸಲಹೆ ಮಾಡಿದರು. ಉತ್ಸವದಲ್ಲಿ ಮಾಧ್ಯಮಗೋಷ್ಠಿಗೆ ಅವಕಾಶವಿರಲಿ ಎಂದು ಪತ್ರಕರ್ತರಾದ ಖಾನಸಾಬ ಮೋಮಿನ್ ತಿಳಿಸಿದರು.

ಉತ್ಸವದಲ್ಲಿ ಅಂತಾರಾಷ್ಟ್ರೀಯ ಕಲಾವಿದರಿಗೆ ಅವಕಾಶ ನೀಡಬೇಕು ಎಂದು ಹಿರಿಯ ಪತ್ರಕರ್ತರಾದ ಅರವಿಂದ ಕುಲಕರ್ಣಿ ಅವರು ಸಲಹೆ ಮಾಡಿದರು.ಉತ್ಸವ ಹಿನ್ನೆಲೆಯಲ್ಲಿ ರಾಯಚೂರು ಕೋಟೆಗೆ ವಿದ್ಯುತ್ ಅಲಂಕಾರ ಮಾಡಲು ಮೊಮಿನ್ ಅವರು ಸಲಹೆ ಮಾಡಿದರು.ಜಿಲ್ಲೆಯ ಎಲ್ಲ ಸಂಘಟನೆಯ ಪ್ರತಿನಿಧಿಗಳಿಗೆ ಆಯಾ ವೇದಿಕೆಗೆ ಜವಾಬ್ದಾರಿ ವಹಿಸಬೇಕು ಎಂದು ಕಲಾ ಸಂಸ್ಥೆಯ ಅಧ್ಯಕ್ಷರು ಸಲಹೆ ಮಾಡಿದರು.ಬಿತ್ತನೆ ಬೀಜಗಳ ಬಗ್ಗೆ ಜನತೆ ಮೋಸ ಹೋಗುತ್ತಿದ್ದಾರೆ. ಹಾಗಾಗಿ ಜನತೆಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೃಷಿ ಉತ್ಸವ ಮಾಡಬೇಕು ಯುವ ಮುಖಂಡರು ಸಲಹೆ ಮಾಡಿದರು. ವಿಚಾರಗೋಷ್ಠಿಯಲ್ಲಿ ಸಂವಿಧಾನ ವಿಷಯದ ಚರ್ಚೆಗೆ ಅವಕಾಶ ಮಾಡಬೇಕು ಎಂದು ಚಿಂತಕರು ಸಲಹೆ ಮಾಡಿದರು. ಉತ್ಸವದಲ್ಲಿ ಪ್ರತಿ ಮನೆಯ ಹೆಣ್ಣುಮಕ್ಕಳು ಪಾಲ್ಗೊಳ್ಳುವ ಹಾಗೆ ಮಹಿಳಾ ಕಮೀಟಿ ರಚಿಸಿ ಅವಕಾಶ ನೀಡಬೇಕು ಎಂದು ಪ್ರತಿಭಾ ರೆಡ್ಡಿ ಸಲಹೆ ಮಾಡಿದರು.

ರಾಯಚೂರು ಜಿಲ್ಲೆಯು ವಚನ ಮತ್ತು ದಾಸ ಸಾಹಿತ್ಯಕ್ಕೆ ಹೆಸರಾಗಿದ್ದು, ದಲಿತ ಬಂಡಾಯ ಸಾಹಿತ್ಯ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಸಾಹಿತಿ ಬಾಬು ಬಂಡಾರಿಗಲ್ ತಿಳಿಸಿದರು. ಈ ಉತ್ಸವದಲ್ಲಿ ಜಿಲ್ಲೆಯ ಎಲ್ಲ ಭಾಗದ ಸಾಹಿತಿಗಳಿಗೆ ಅವಕಾಶ ಲಭಿಸಬೇಕು ಎಂದು ಹಿರಿಯ ಸಾಹಿತಿಗಳಾದ ರಂಗಣ್ಣ ಪಾಟೀಲ ಸಲಹೆ ಮಾಡಿದರು. ಮಹಿಳಾ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮಾಲಾ ಭಜಂತ್ರಿ ಅವರು ತಿಳಿಸಿದರು.



ಮಹಿಳಾ ದೌರ್ಜನ್ಯ ಹೆಚ್ಚುತ್ತಿವೆ. ಇಂತಹ ವಿಷಯಗಳ ಬಗ್ಗೆ ವಿಚಾರಗೋಷ್ಠಿಯಲ್ಲಿ ಅವಕಾಶವಿರಲಿ ಎಂದು ಮಹಿಳಾ ಹೋರಾಟಗಾರರು ಸಲಹೆ ಮಾಡಿದರು. ರಾಯಚೂರು ಸಿಟಿಯ ಎಲ್ಲಾ ಕಡೆಗೆ ವಿದ್ಯುದೀಪ ಅಳವಡಿಸಿ ನಗರ ಸೌಂದರ್ಯಕ್ಕೆ ಒತ್ತು ಕೊಡಬೇಕು ಎಂದು

ನರೇಂದ್ರ ಆರ್ಯ ಸಲಹೆ ಮಾಡಿದರು. ಮೆರವಣಿಗೆಯಲ್ಲಿ ಸ್ತಬ್ಧಚಿತ್ರಕ್ಕೆ ಅವಕಾಶವಿರಬೇಕು. ಜನಜಾಗೃತಿಯ ಕಿರುಚಿತ್ರಗಳ ಪ್ರದರ್ಶನ ಮಾಡಬೇಕು. ಕರಾಟೆ ಸ್ಪರ್ಧೆಗೂ ಅವಕಾಶವಿರಬೇಕು ಎಂದು ಪತ್ರಕರ್ತ ರಘುವೀರ ನಾಯಕ ಸಲಹೆ ಮಾಡಿದರು. ಎಲ್ಲರೂ ಸೇರಿ ಉತ್ಸವ ಯಶಗೊಳಿಸೋಣ ಎಂದು ಹಿರಿಯರಾದ ಶಶಿಕಲಾ ಭೀಮರಾಯ ಸಲಹೆ ಮಾಡಿದರು. ಉತ್ಸವದಲ್ಲಿ ಕ್ರೀಡಾಪಟುಗಳಿಗೆ ಸನ್ಮಾನಿಸಬೇಕು ಎಂದು ಖೋಖೋ ಅಸೋಸಿಯೇಶನದಿಂದ ಸಲಹೆ ಬಂದಿತು. ಉತ್ಸವದಲ್ಲಿ ಏರ್ ಶೊ ಗೆ ವ್ಯವಸ್ಥೆ ಮಾಡಬೇಕು ಎಂದು ಯುವಕರು ಸಲಹೆ ಮಾಡಿದರು. ರಾಜ್ಯೋತ್ಸವ ಪುರಸ್ಕೃತರನ್ನು ಉತ್ಸವದಲ್ಲಿ ಸನ್ಮಾನಿಸಿ ಗೌರವಿಸಬೇಕು ಎಂದು ಪತ್ರಕರ್ತರಾದ ಅಣ್ಣಪ್ಪ ಮೇಟಿಗೌಡ ಅವರು ಸಲಹೆ ಮಾಡಿದರು. ಸಭೆಯಲ್ಲಿ ಸವಿತಾ ಸಮಾಜದ ವಿ ಗೋವಿಂದ, ಛಾಯಾಗ್ರಹಕರ ಸಂಘದ ಅಧ್ಯಕ್ಷರಾದ ಶರಣಬಸವ ಹಿರೇಮಠ, ಮಹಿಳಾ ಮುಖಂಡರಾದ ಲಕ್ಷ್ಮಿ ನರಸಿಂಹ, ಗಾಯತ್ರಿ ಹಾಗೂ ಇತರರು ಸಲಹೆ ಮಾಡಿದರು.

ಈ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿ, ಉತ್ಸವಕ್ಕೆ ಸ್ಪೂರ್ತಿದಾಯಕ ಸಲಹೆಗಳು ಕೇಳಿ ಬಂದಿವೆ. ಎಲ್ಲ ಸಲಹೆಗಳನ್ನು ಪರಿಗಣಿಸುತ್ತೇವೆ. ಪ್ರತಿ ತಾಲೂಕಿನಲ್ಲಿ ಸಹ ಸಂಘ ಸಂಸ್ಥೆಗಳ ಸಭೆಯನ್ನು ತಹಸೀಲ್ದಾರ ಮತ್ತು ಇಓ ಸಮ್ಮುಖದಲ್ಲಿ ಮಾಡಿಸುತ್ತೇವೆ ಎಂದು ತಿಳಿಸಿದರು.ಈ ಉತ್ಸವವನ್ನು ಪ್ರತಿ ವರ್ಷ ನಡೆಸುವ ಹಾಗೆ ಕುಟುಂಬದ ರೀತಿ ಎಲ್ಲರೂ ಸೇರಿ ಉತ್ಸವ ಮಾಡೋಣ ಎಂದು ಮನವಿ ಮಾಡಿದರು. ಹಂಪಿ ಉತ್ಸವ ಮಾದರಿಯಲ್ಲಿ ಏರ್ ಶೋ ಹಾಗೂ ಮಕ್ಕಳ ಉತ್ಸವಕ್ಕೆ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ಸಭೆಯಲ್ಲಿ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ, ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ ಹಾಗೂ ಇನ್ನೀತರರು ಉಪಸ್ಥಿತರಿದ್ದರು.

ಯುವ ಮಾರ್ಗ

www.yuvamarga.com Yuva Marga yuva_marga_

## ಮೊದಲನೇಯ ಪುಟದಿಂದ

# ಅಕ್ರಮ ಮದ್ಯ ಮಾರಾಟ ಕ್ರಮಕ್ಕೆ ಒತ್ತಾಯ

ಇತ್ತಿಚಿನ ದಿನಗಳಲ್ಲಿ ಈಚನಾಳ ಸೇರಿದಂತೆ ಸುತ್ತಮುತ್ತಲಿನ ಕೆಲ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು ಇದ ರಿಂದ ಗ್ರಾಮದ ಬಹುತೇಕ ಯುವಕರು, ವೃದ್ಧರು, ಸಾರಾಯಿ ದಾಹಕ್ಕೆ ಬಲಿಯಾಗಿದ್ದಾರೆ.

ಹಾಗಾಗಿ ಹಲವು ಕುಟುಂಬಗಳು ಬೀದಿಗೆ ಬಿದ್ದಿವೆ. ಇದರಿಂದ ಕುಟುಂಬಗಳ ಕಲಹಗಳಿಂದ ಗ್ರಾಮದಲ್ಲಿ ಅಶಾಂತಿ ಉಂಟಾಗುತ್ತಿದೆ, ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಹಾಗಾಗಿ ಈ ಕೂಡಲೇ ಆಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಅಬಕಾರಿ ವೃತ್ತನಿರೀಕ್ಷಕರಾದ ಲಕ್ಷ್ಮೀ ದೇವಿ,ಹಾಗೂ ಪಿಡಿಓ ಬಸಯ್ಯ ಅವರಿಗೆ ಸಂಜೀವಿನಿ ಮಹಿಳಾ

ಸಂಘಟನೆಗಳ ಮುಖಂಡರು ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದರು.

ಈ ಸಂಧರ್ಭದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಯಂಕಮ್ಮ ಮೇಟಿ, ಕಾರ್ಯದರ್ಶಿ ಚಂದ್ರಿಕಾ, ಸರಸ್ವತಿ ಬಡಿಗೇರ್, ಶೋಭಾ ಮೇಟಿ,ರೈತ ಸಂಘದ ದೇವಪ್ಪ ಕರಡಿ, ಮಲ್ಲರೆಡ್ಡಿ ಸೇರಿದಂತೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

### ಸಿಂಧನೂರು ಜಿಲ್ಲೆಯಾಗಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ: ಡಾ.ಬಿ.ಎನ್.ಪಾಟೀಲ್

ಮುಂದುವರೆದ ಊರಾಗಿದೆ. ಅದರ ಜೊತೆಗೆ ಮಸ್ಕಿ, ಲಿಂಗಸ್ಗೂರು, ಕಾರಟಗಿ, ಸಿರಗುಪ್ಪ, ತಾವರಗೇರಾ, ಪ್ರಮುಖರ ಜೊತೆಗೆ ಮಾತನಾಡಿ, ಸಿಂಧನೂರು ಜಿಲ್ಲಾ ಕೇಂದ್ರ ಮಾಡೋಣ ಎಂದು ಮನವೊಲಿಸಬೇಕಾಗಿದೆ ಎಂದರು.

ಎಂ.ದೊಡ್ಡಬಸವರಾಜ ಮಾತನಾಡಿ, ಹಿರಿಯರ ಮುಖಂಡರ ಸಂಕಲ್ಪ ಸಿಂಧನೂರನ್ನು ಜಿಲ್ಲಾ ಕೇಂದ್ರ ಮಾಡಲು ಚೈತನ್ಯ, ಸ್ಪೂರ್ತಿ, ತುಂಬುವ ಕೊಂಡಿಯಾಗಿ ಕೆಲಸ ಮಾಡೋಣ, ಸರ್ವ ಧರ್ಮದವರಿಗೂ ಸರ್ವ ಪಕ್ಷದವರಿಗೂ, ರೈತರಿಗೂ, ಕೃಷಿಕರಿಗೂ, ನಾಗರಿಕರಿಗೂ, ಮಹಿಳೆಯರಿಗೂ, ವಿದ್ಯಾರ್ಥಿಗಳಿಗೂ ಸೇರಿದಂತೆ ಪ್ರತಿಯೊಬ್ಬರಿಗೂ ಸಿಂಧನೂರು ಜಿಲ್ಲಾ ಕೇಂದ್ರ ಆಗುವುದರಿಂದ ಅನುಕೂಲವಾಗುತ್ತದೆ. ಇದರಿಂದಾಗಿ 100 ಕಿ.ಮೀ.ಅಂತರದಲ್ಲಿರುವ ರಾಯಚೂರಿಗೆ ಹೋಗುವುದು ತಪ್ಪುತ್ತದೆ. ಜೊತೆಗೆ ನಮ್ಮ ರಾಜಕೀಯ ಹಿರಿಯ ನಾಯಕರಾದ ಕೆ.ವಿರುಪಾಕ್ಷಪ್ಪ, ಹಂಪನಗೌಡ ಬಾದರ್ಲಿ, ವೆಂಕಟರಾವ್ ನಾಡಗೌಡ, ಕೆ.ಕರಿಯಪ್ಪ, ಅನೇಕರು ಸರ್ಕಾರದ ಮಟ್ಟದಲ್ಲಿ ಧ್ವನಿ ಎತ್ತಬೇಕು ಎಂದರು.

ವೈ.ನರೇಂದ್ರನಾಥ, ಜಮಾಅತೆ ಇಸ್ಲಾಂ ಹಿಂದ್ ತಾಲೂಕು ಅಧ್ಯಕ್ಷ ಹುಸೇನ್ ಸಾಬ್, ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶರಣಪ್ಪ ಕೆ ಗೋನಾಳ, ಹಿರಿಯ ಪತ್ರಕರ್ತ ಡಿ.ಎಚ್.ಕಂಬಳಿ, ರೈತ ಮುಖಂಡ ಅಮೀನ್ ಪಾಷಾ ದಿದ್ದಿಗಿ, ಸರಸ್ವತಿ ಪಾಟೀಲ್, ಕೆ.ಭೀಮಣ್ಣ, ರವಿಗೌಡ ಮಲ್ಲದಗುಡ್ಡ, ಶ್ರೀದೇವಿ ಶ್ರೀನಿವಾಸ, ಎಚ್.ಎಫ್.ಮಸ್ಕಿ, ತಿಮ್ಮಣ್ಣ ನಾಯಕ್, ಕರೇಗೌಡ ಕುರುಕುಂದಿ, ಮೌನೇಶ ದೊರೆ, ಅಶೋಕ ಉಮಲೂಟಿ, ಶಾಂತನಗೌಡ ಜಾಗೀರದಾರ್,

ಸೇರಿದಂತೆ ಸಾರ್ವಜನಿಕರು ಸೇರಿದಂತೆ ಒಮ್ಮತದ ನಿರ್ಧಾರ ತಿಳಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು ಸಲಹೆ ಸೂಚನೆಗಳನ್ನು ನೀಡಿದರು

# ಬಳ್ಳಾರಿ ಗಲಭೆ ಸಿಬಿಐ ತನಿಖೆಯಿಲ್ಲ

ಎಂದು ವಿಪಕ್ಷಗಳ ವಿರುದ್ಧ ಕಿಡಿಕಾರಿದರು. ಪೊಲೀಸ್ ಆಯುಕ್ತರು ಈಗಾಗಲೇ ನಾವು ಮಹಿಳೆಯನ್ನು ವಿವಸ್ತ್ರ ಮಾಡಿಲ್ಲ. ಆಕೆಯೇ ಪೊಲೀಸ್ ಬಂಧನವಾದ ಮೇಲೆ ಆ ರೀತಿ ನಡೆದುಕೊಂಡಿದ್ದಾರೆ ಎಂದರು. ಪೊಲೀಸ್ ಆಯುಕ್ತರೇ ಹೇಳಿರುವಾಗ ಅದಕ್ಕಿಂತ ಇನ್ನೇನ್ನು ಹೇಳಬೇಕು. ಎಲ್ಲದರಲ್ಲೂ ರಾಜಕೀಯ ಮಾಡುವುದು ಒಳ್ಳೆಯದಲ್ಲ. ಒಬ್ಬ ಹೆಣ್ಣು ಮಗಳ ವಿಚಾರದಲ್ಲಿ ಈ ರೀತಿ ರಾಜಕೀಯ ಮಾಡುವುದು ಸರಿ ಕಾಣಲ್ಲ ಎಂದು ಹೇಳಿದರು.

ಯಾವ ಪಕ್ಷದವರನ್ನೂ ಅವರ ರಾಜಕೀಯ ಹಿನ್ನೆಲೆಯಲ್ಲಿ ಟಾರ್ಗೆಟ್ ಮಾಡುವ ಪ್ರಶ್ನೆಯೇ ಇಲ್ಲ. ಪೊಲೀಸರಿಗೆ ಆ ರೀತಿ ಮಾಡಲು ನಾವು ಅವಕಾಶ ಮಾಡಿಕೊಡಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಅನಧಿಕೃತವಾಗಿ ಬಾಂಗ್ಲಾ ದೇಶದವರು ನೆಲೆಸಿದ್ದರೆ ಅವರನ್ನು ಗಡಿಪಾರು ಮಾಡುವ ಕೆಲಸ ಮಾಡುತ್ತೇವೆ. ಬೆಂಗಳೂರಿನಲ್ಲಾಗಲಿ, ರಾಜ್ಯದಲ್ಲಾಗಲಿ ಎಲ್ಲೆ ಆಗಲಿ ಬಾಂಗ್ಲಾ ದೇಶದ ನಿವಾಸಿಗಳಿದ್ದರೆ ಪತ್ತೆಹಚ್ಚಿ ಅವರನ್ನು ಗಡಿಪಾರು ಮಾಡುವ ಕೆಲಸ ಮಾಡುತ್ತೇವೆ ಎಂದರು

ರಬ್ಬರ್ ಸ್ಟ್ಯಾಂಪ್ ಎಂದ ಕುಮಾರಸ್ವಾಮಿಗೆ ಧನ್ಯವಾದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ನನ್ನನ್ನು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರು ಎಂದಿದ್ದಾರೆ. ಅದನ್ನು ನಾನು ಸ್ವೀಕರಿಸುತ್ತೇನೆ ಅವರಿಗೆ ಧನ್ಯವಾದ ಹೇಳುತ್ತೇನೆ ಎಂದು ವ್ಯಂಗ್ಯವಾಗಿ ಹೇಳಿದರು.

ಕೇಂದ್ರದ ಸಚಿವರಾಗಿರುವ ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದವರು. ಜವಾಬ್ದಾರಿಯಿಂದ ಅವರು ಮಾತನಾಡಿದ್ದಾರೆ ಎಂದು ಅಂದುಕೊಳ್ಳುತ್ತೇನೆ. ಅವರ ಮಾತುಗಳನ್ನು ಸ್ವೀಕರಿಸುತ್ತೇನೆ. ನಾನಂತೂ ಒಬ್ಬ ಜವಾಬ್ದಾರಿ ಗೃಹ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲ ಅರಿವು ನನಗಿದೆ ಎಂದರು.

ಕುಮಾರಸ್ವಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಅವರಿಗೆ ನನ್ನ ಸಾಮರ್ಥ್ಯ, ವ್ಯಕ್ತಿತ್ವ ಎಲ್ಲವೂ ಗೊತ್ತಿದೆ. ಹೀಗಿದ್ದರೂ ಅವರು ನನ್ನ ಬಗ್ಗೆ ಮತನಾಡಿದ್ದಾರೆ ಇರಲಿ ಅವರು ಜವಾಬ್ದಾರಿಯುತವಾಗಿ ಮಾತನಾಡಿದ್ದಾರೆ ಎಂದು ಅಂದುಕೊಳ್ಳುತ್ತೇನೆ ಎಂದು ತಿರುಗೇಟು ನೀಡಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಎಷ್ಟು ದಿನ ನಾನು ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಹೇಳಿಕೆ ನೀಡಿದ್ದಾರಲ್ಲಾ ಎಂಬ ಪ್ರಶ್ನೆಗೆ. ಅದಕ್ಕೆ ನಾನೇನು ಹೇಳಲಿ. ನೀವು ಏನು ನಿರೀಕ್ಷೆ ಮಾಡಿದ್ದಿರೋ ಅವರು ಹೇಳಿದ್ದಾರೆ ನಿಜ. ಅದಕ್ಕೆ ನಾನೇನು ಪ್ರತಿಕ್ರಿಯೆ ಕೊಡಲಿ ಎಂದರು.

# ಹೆಣ್ಣು ಮಕ್ಕಳಿಗೆ 264 ಸೈಕಲ್ ವಿತರಣೆ



**ಕಲಬುರಗಿ,ಜ.8**–ಮಾರ್ಗದರ್ಶಿ ಸಂಸ್ಥೆ ವತಿಯಿಂದ ಈಚೆಗೆ ನಗರದ ಸಂತ ಮೇರಿ ಚರ್ಚನ ಮದರ್ ಥೆರೆಸಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹೆಣ್ಣು ಮಕ್ಕಳಿಗೆ 264 ಸೈಕಲ್‌ಗಳನ್ನು ವಿತರಿಸಲಾಯಿತು.

ನಗರ ಪೊಲೀಸ್ ಆಯುಕ್ತರಾದ ಡಾ.ಶರಣಪ್ಪ ಎಸ್ ಡಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಕ್ಕಳಿಗೆ ಸೈಕಲ್ ವಿತರಣೆ ಮಾಡಿ ಮಾತನಾಡಿದರು. ಸೈಕಲ ಗಳ ಉಪಯೋಗ ಮಾಡಿಕೊಳ್ಳುವ ಬಗ್ಗೆ ಧೈರ್ಯವಾಗಿ ಶಾಲೆಗೆ ಹೋಗಲು ಆತ್ಮಸ್ಥೈರ್ಯವನ್ನು ತುಂಬಿದರು.

ಫಾದರ್ ಜೋರ್ಸೆಫ್ ಪ್ರವೀಣ್ ಅವರು ಮಾತನಾಡಿ, ಮಕ್ಕಳಿಗೆ ಸೈಕಲ್ ಕೊಡುವುದರಿಂದ ಅವರು ವಿದ್ಯಾಭ್ಯಾಸದ ಮಟ್ಟ ಹೆಚ್ಚಿಗೆ ಆಗಬೇಕು ಅಂಕಗಳು ಹೆಚ್ಚಿಗೆ ಗಳಿಸಬೇಕು ಎಂದು ಹೇಳಿದರು.

ಹೀರೋ ಸೈಕಲ್ ಸಂಸ್ಥೆಯ ನಿರ್ದೇಶಕರಾದ ನವೀನ್ ಪಾಲ್ ಅವರು ಮಕ್ಕಳಿಗೆ ಸೈಕಲ್ ಕೊಡುವುದರಿಂದ ಶಿಕ್ಷಣಕ್ಕೆ ಅನುಕೂಲವಾಗುತ್ತೆ ಶಾಲೆಗೆ ನಿರಂತರ ಹೋಗುವುದರಿಂದ ಶಾಲೆಯಲ್ಲಿ ವಿವಿಧ ರೀತಿಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಿಗೆ ಬೌದ್ಧಿಕವಾಗಿ ಶಾರೀರಿಕವಾಗಿ ಸದೃಢರಾಗುತ್ತಾರೆ ಆದ್ದರಿಂದ ಹೀರೋ ಸೈಕಲ್ ಇದರ ಉಪಯೋಗ ಹೆಚ್ಚಿನದಾಗಿ ಕಂಡು ಬಂದರೆ ಇನ್ನೂ ಹೆಚ್ಚಾಗಿ ಸೈಕಲ್ ಗಳನ್ನು ಹೆಣ್ಣು ಮಕ್ಕಳಿಗೆ ಕೊಡುವುದಾಗಿ ಭರವಸೆಯನ್ನು ನೀಡಿದರು.

ಅದೇ ರೀತಿಯಾಗಿ ಕಾರ್ಯಕ್ರಮದ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ವಿ ಪಾಟೀಲ್ ಮಾತನಾಡಿ, ಮಕ್ಕಳು ಸುರಕ್ಷತೆಯಿಂದ ಇರಬೇಕು ಮಕ್ಕಳಿಗೆ ಯಾವುದೇ ಅಹಿತಕರ ಘಟನೆಗಳು ನಡೆದರೆ ಅಥವಾ ಸಂಕಷ್ಟದಲ್ಲಿ ಇದ್ದರೆ 1098 ಕರೆ ಮಾಡಬೇಕು ಎಂದು ತಿಳಿಸಿದರು.125 ಮಕ್ಕಳು ಮಾರ್ಗದರ್ಶಿ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ತರಬೇತಿಯನ್ನು ವಿವಿಧ ಕಂಪ್ಯೂಟರ್ ಸೆಂಟರ್‌ಗಳಲ್ಲಿ ಕಲಿತುಕೊಂಡಿದ್ದು, ಅವರಿಗೆ ಈ ಸಂದರ್ಭದಲ್ಲಿ ಕಂಪ್ಯೂಟರ್ ತರಬೇತಿಯ ಸರ್ಟಿಫಿಕೆಟ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಸ್ವಿಪಿ ಇಂಡಿಯಾದ ಪದ್ಮಶ್ರೀ ಮಾತನಾಡಿ, ಮಕ್ಕಳಿಗೆ ಈ ಸೈಕಲ್ ಕೊಡುವುದರಿಂದ ಏನೆಲ್ಲಾ ಉಪಯೋಗವಾಗುತ್ತದೆ ಎಂಬುದರ ಕುರಿತು ಸವಿಸ್ತಾರವಾಗಿ ಚರ್ಚೆಯ ಮೂಲಕ ವಿವರಿಸಿ ಹೇಳಿದರು. ಕೊನೆಯದಾಗಿ ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕ ಆನಂದ ರಾಜ್ ವಂದನಾರ್ಪಣೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾರ್ಗದರ್ಶಿ ಸಂಸ್ಥೆ ಅಧ್ಯಕ್ಷ ಡಾ.ಮಲ್ಹಾರಾವ್ ಮಲ್ಲೆ, ಎಸ್ವಿಪಿಯ ಸದಸ್ಯರಾದ ಅಬ್ಬುಬಕ್ಕರ್ ಚೇರ್ ಪರ್ಸನ್ ಮನಿಷ್ ಗುಪ್ತ, ಪ್ರೋಗ್ರಾಮ್ ಮ್ಯಾನೇಜರ್ ಶ್ವೇತಾ, ಮಾರ್ಗದರ್ಶಿ ಸಂಸ್ಥೆಯ ಸದಸ್ಯರಾದ ರಾಯಪ್ಪ ರೆಡ್ಡಿ, ಮಾರ್ಗದರ್ಶಿ ಚಾರಿಟಿ ಟ್ರಸ್ಟ್ ಅಧ್ಯಕ್ಷೆ ಯಶೋಧಾ, ಮಕ್ಕಳು ಪಾಲಕರು ಶಿಕ್ಷಕರು ಉಪಸ್ಥಿತರಿದ್ದರು.

# ತಾಲೂಕು ದಲಿತ ವಿದ್ಯಾರ್ಥಿ ಪರಿಷತ್ತಿನ ನೂತನ ಕ್ಯಾಲೆಂಡರ್ ಬಿಡುಗಡೆ



ಯುವಮಾರ್ಗ ಸುದ್ದಿ

**ತುರ್ವಿಹಾಳ,ಜ.8**–ಪಿಎಸ್ಐ ಗ್ರಾಮೀಣ ಪೊಲೀಸ್ ಠಾಣೆ ತುರ್ವಿಹಾಳ ಹಾಗೂ ಗ್ರಾಮ ಪಂಚಾಯಿತಿ ಕಲಮಂಗಿ ಅಭಿವೃದ್ಧಿ ಅಧಿಕಾರಿಗಳು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿಯಿಂದ 2026ರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ದಲಿತ ವಿದ್ಯಾರ್ಥಿ ಪರಿಷತ್ ತಾಲೂಕ ಅಧ್ಯಕ್ಷ ದುರುಗೇಶ ಕಲಮಂಗಿ ಮಾತನಾಡಿ, ರಾಜ್ಯದಾದ್ಯಂತ ಲಕ್ಷಾಂತರ ವಿದ್ಯಾರ್ಥಿ ಯುವ ಜನರನ್ನು ಹೊಂದಿರುವ ಸಂಘಟನೆ ಕಾರ್ಯ ಪ್ರವೃತ್ತಿಯಾಗಿದೆ, ಸಮಿತಿಯ ಧ್ಯೆಯ ವಾಕ್ಯ ವಿದ್ಯೆಯೆ ವಿಮೋಚನೆಗೆ ಹೆದ್ದಾರಿ ಎನ್ನುವ ನಿಟ್ಟಿನಲ್ಲಿ ಶಿಕ್ಷಣಕ್ಕೆ ಪ್ರಮುಖ ಪ್ರಾಶಸ್ತ್ಯ ನೀಡಿ, ವಿದ್ಯಾರ್ಥಿ ಯುವ ಜನರಿಗಾಗಿ ಹಗಲಿರಳು ಶ್ರಮಿಸುವಂತಹ ಸಂಘಟನೆಯಾಗಿದೆ. ಅದರ ಭಾಗವಾಗಿ ನಾಡಿನದ್ಯಂತ ವಿದ್ಯಾರ್ಥಿಗಳ ಏನೇ ಸಮಸ್ಯೆಯಿದ್ದರು ಅವರಿಗೆ ಸ್ಪಂದಿಸುತ್ತಾ ಹಲವಾರು ಹೋರಾಟಗಳ ಮುಖೇನ ವಿದ್ಯಾರ್ಥಿ ಯುವ ಜನರ ಹಕ್ಕುಗಳನ್ನು ಕೊಡಿಸುವಲ್ಲಿ ಯಶಸ್ವಿ ಕಂಡಿದ್ದೇವೆ.

ಅಷ್ಟೇ ಅಲ್ಲದೆ ರಾಜ್ಯದಾದ್ಯಂತ ಅಂಬೇಡ್ಕರ್ ಅವರ ಹೆಸರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸಿ ಲಕ್ಷಾಂತರ ರೂಪಾಯಿ ಬಹುಮಾನಗಳನ್ನು ಕೂಡ ನೀಡುತ್ತಿದೆ. ಜೊತೆಗೆ ಉಚಿತ ಕೋಚಿಂಗ್ ಬಂದಿದ್ದೇವೆ ಇದರ ಭಾಗವಾಗಿ ಗುರುವಾರ ಸಮಿತಿಯ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಪಿಎಸ್ಐ ಸುಜಾತ ಮಾತನಾಡಿ, ಈ ಒಂದು ಕ್ಯಾಲೆಂಡರ್ ವಿಶೇಷವಾಗಿದೆ. ಮಹಾನ್ ವ್ಯಕ್ತಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಧನೆಯ ಒಂದೊಂದು ದಿನಾಂಕದಂದು ಮಾಡಿದ ಸಾಧನೆಯನ್ನು ಕುರಿತು ಕ್ಯಾಲೆಂಡರ್ ಬಿಡುಗಡೆ ಮಾಡಿದ್ದಾರೆ. ಜನವರಿಯಿಂದ ಹಿಡಿದು ಡಿಸೆಂಬರ್ ವರೆಗೆ ಅವರ ಸಾಧನೆಯನ್ನೇ ತೋರಿಸಿದ್ದಾರೆ ಎಂದು ಹೇಳಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಹುಚ್ಚಪ್ಪ ನೇಗಲಿ ಅವರು ಮಾತನಾಡಿ, ದಲಿತ ವಿದ್ಯಾರ್ಥಿ ಪರಿಷತ್ ಎಂಬುವುದು ದಲಿತರಿಗಾಗಿ ಅಲ್ಲದೆ ಪ್ರತಿಯೊಬ್ಬರಿಗಾಗಿ ಸಹ ಉತ್ತಮ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ತೊಂದರೆ ಇದ್ದರೆ, ಮುಂಚೂಣಿಯಲ್ಲಿ ಬಂದು ಸ್ಪಂದಿಸುವಂತಹ ಕಾರ್ಯ ಈ ಸಂಘಟನೆ ಮಾಡುತ್ತಿದೆ. ಕ್ಯಾಲೆಂಡರ್ ಬಿಡುಗಡೆ ಮಾಡಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರವರ ಸಾಧನೆಯ ಭಾವಚಿತ್ರಗಳನ್ನು ಸಹ ಅಳವಡಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ: ಆಂಜನೇಯ ನಾಯಕ ಗ್ರಾ.ಪಂ ಅಧ್ಯಕ್ಷ, ಮುಖಂಡರಾದ ಹನುಮಂತ ಕಲ್ಮಂಗಿ, ಮೊಹಮ್ಮದ್ ಸುಲೇಮಾನ್, ಶಶಿಕುಮಾರ, ಯಲ್ಲಪ್ಪ, ದೇವೇಂದ್ರ, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಶಾಲೆಗಳಲ್ಲಿ ಬಯಲು ಗ್ರಂಥಾಲಯ ಆರಂಭಿಸಿ:ಬಣಗಾರ ಒತ್ತಾಯ



**ಕಲಬುರಗಿ,ಜ.8**–ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹಾಗೂ ಅರಿವು ಮೂಡಿಸಲು ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಬಯಲು ಗ್ರಂಥಾಲಯಗಳನ್ನು ಆರಂಭಿಸಬೇಕು ಎಂದು ಬಯಲು ಗ್ರಂಥಾಲಯ ಸಂಸ್ಥಾಪಕ ಹಾಗೂ ಹಿರಿಯ ಪತ್ರಕರ್ತ ಸುಭಾಷ ಬಣಗಾರ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊಬೈಲ್ ಹಾವಳಿಯಿಂದಾಗಿ ಮಕ್ಕಳಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅವರಲ್ಲಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಸಕ್ತಿ ಹಾಗೂ ಅರಿವು ಮೂಡಿಸಲು ಶಾಲಾ ಕಾಲೇಜುಗಳಲ್ಲಿ ಬಯಲು ಗ್ರಂಥಾಲಯ ಆರಂಭಿಸಿ ನಿಯತಕಾಲಿಕಗಳು, ಪತ್ರಿಕೆಗಳನ್ನು ಒದಗಿಸಬೇಕು ಎಂದು ಅವರು ಸರ್ಕಾರಕ್ಕೆ ಮನವಿ ಮಾಡಿದರು.

ಶಾಲೆಯ ಆವರಣಲದಲ್ಲಿ ಬಯಲು ಗ್ರಂಥಾಲಯ ಆರಂಭಿಸಿ ಮಕ್ಕಳು ಓದಲು ಅನುಕೂಲವಾಗುವಂತೆ ಟೇಬಲ್, ಕುರ್ಚಿಗಳನ್ನು ದುಂಡು ಮೇಜಿನ ತರಹ ಹಾಕಬೇಕು, ರಾಜ್ಯ, ಜಿಲ್ಲಾ ಹಾಗೂ ಪ್ರಾದೇಶಿಕ ಪತ್ರಿಕೆಗಳು, ನಿಯತಕಾಲಿಕಗಳನ್ನು ಹಾಕಿಸುವ ವ್ಯವಸ್ಥೆ ಮಾಡಬೇಕು, ಇದನ್ನು ನೋಡಿಕೊಳ್ಳಲು ಪ್ರತಿ ಶಾಲೆಯಲ್ಲಿ ಗ್ರಂಥಾಲಯ ಮೇಲ್ವಿಚಾರಕರನ್ನು ನೇಮಕ ಮಾಡಬೇಕು. ಗ್ರಂಥಾಲಯ ಸ್ಥಾಪಿಸುವ ಆವರಣದ ಸುತ್ತ ಸುಂದರವಾದ, ಹಚ್ಚ ಹಸಿರಿನಿಂದ ಕಂಗೊಳಿಸುವಂತ ಆಹ್ಲಾದಕರ ವಾತಾವರಣ ನಿರ್ಮಾಣ ಮಾಡಲು ಚಿಕ್ಕ ಉದ್ಯಾನವನ ನಿರ್ಮಾಣ ಮಾಡಬೇಕು, ಹೂ, ಗಿಡಗಳನ್ನು ಬೆಳೆಸಬೇಕು. ಈ ವಾತಾವರಣವು ಮಕ್ಕಳ ಮೇಲೆ ಉತ್ತಮ, ಆರೋಗ್ಯಕರ ಪರಿಣಾಮ ಬೀರಲು ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ಈ ನಿಟ್ಟಿನಲ್ಲಿ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಮಕ್ಕಳಿಗೆ ಪ್ರಚಲಿತ ವಿದ್ಯಮಾನದ ಬಗ್ಗೆ ಅರಿವು ಮೂಡಿಸಲು ಉತ್ತರ ಪ್ರದೇಶ ಹಾಗೂ ರಾಜ್ಯಸ್ಥಾನ ರಾಜ್ಯಗಳಲ್ಲಿನ ಶಾಲೆಗಳಲ್ಲಿ ಪತ್ರಿಕೆಗಳನ್ನು ಓದುವುದನ್ನು ಕಡ್ಡಾಯಗೊಳಿಸಿ ಅಲ್ಲಿನ ಸರ್ಕಾರಗಳು ಆದೇಶ ಹೊರಡಿಸಿವೆ. ಇದು ಸ್ವಾಗತಾರ್ಹ. ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಬಯಲು ಗ್ರಂಥಾಲಯ ಆರಂಭಿಸುವಂತೆ ಶಿಕ್ಷಣ ಸಚಿವ ಮಧು ಬಂಗಾರಪ್ಪನವರಿಗೆ ಈಚೆಗೆ ಬೆಂಗಳೂರಿನಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದ 24,347 ಶಾಲೆಗಳಲ್ಲಿ 20 ಕೋಟಿ ರೂ.ಅನುದಾನದಲ್ಲಿ ಪುಸ್ತಕ, ಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಒದಗಿಸುವ ಮೂಲಕ ಗ್ರಂಥಾಲಯ ಬಲವರ್ಧನೆ ಹಾಗೂ ರೀಡಿಂಗ್ ಕಾರ್ನಗಳನ್ನು ಸ್ಥಾಪಿಸುವ ಕುರಿತು ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು. ಆದರೆ ಅದು ಘೋಷಣೆಗೆ ಮಾತ್ರ ಸೀಮಿತವಾಯಿತು ಎಂದು ವಿಷಾದಿಸಿದರು.

ಈಗಲಾದರೂ ಸರ್ಕಾರ ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಬಯಲು ಗ್ರಂಥಾಲಯಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನ್ಯಾಯವಾದಿ ವಿನೋದಕುಮಾರ ಜನೆವರಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಜೂಜಾಟ: 14 ಮಂದಿ ಬಂಧನ

**ಕಲಬುರಗಿ,ಜ.8**–ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ನಾಗನಹಳ್ಳಿ ಗ್ರಾಮದ ಕೊರೆಮ್ಮಾ ದೇವಸ್ಥಾನ ಪಕ್ಕದ ಸಾರ್ವಜನಿಕ ಸ್ಥಳ ಮತ್ತು ಸಬ್–ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯ ಅವರಾದ (ಬಿ) ಗ್ರಾಮದಲ್ಲಿ ಜೂಜಾಟವಾಡುತ್ತಿದ್ದ 14 ಜನರನ್ನು ವಿಶ್ವವಿದ್ಯಾಲಯ ಮತ್ತು ಸಿಸಿಬಿ ಘಟಕದ ಪೊಲೀಸರು ಬಂಧಿಸಿದ್ದಾರೆ.

ನಾಗನಹಳ್ಳಿ ಗ್ರಾಮದ ಕೊರೆಮ್ಮ ದೇವಸ್ಥಾನ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪಿಐ ಚಂದ್ರಶೇಖರ್, ಸಿಬ್ಬಂದಿಗಳಾದ ಈರಣ್ಣಾ, ಜೈಭೀಮ್, ಶಿವಶರಣಪ್ಪ, ವಿಠ್ಠಲ ಮತ್ತು ಭೋಗೇಶ್ ಅವರು ದಾಳಿ ನಡೆಸಿ ಈರಣ್ಣಾ ಪಟ್ಟಣ, ರಾಜಕುಮಾರ ನಾಗನಹಳ್ಳಿ, ಸೂರ್ಯಕಾಂತ ನಡುವಿನಮನೆ, ಶಾಂತಕುಮಾರ ಬಿರಾದಾರ, ರೇವಣಸಿದ್ದಪ್ಪ ಸಾವಳಗಿ, ಶಿವರಾಜ ದಿವಟಗಿ ಮತ್ತು ಸಿದ್ರಾಮಪ್ಪ ಸಿಂಪಿ ಎಂಬುವವರನ್ನು ಬಂಧಿಸಿ 12,100 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಇನ್ನು ಸಬ್–ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯ ಅವರಾದ (ಬಿ) ಗ್ರಾಮದ ಬಸ್ಟ್ಯಾಂಡ್ ಹತ್ತಿರವಿರುವ ಅಂಬಾರಾಯ ಹರಸೂರ ಅವರ ಅಂಗಡಿ ಪಕ್ಕದ ಖುಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಪಿಐ ಅರುಣಕುಮಾರ, ಸಿಬ್ಬಂದಿಗಳಾದ ಮೃತ್ಯುಂಜಯ, ಯಲ್ಲಪ್ಪ, ಶಿವಲಿಂಗ, ಅಶೋಕ ಕಟಕೆ, ಶಿವಕುಮಾರ, ನಾಗರಾಜ, ಸುನೀಲಕುಮಾರ ಅವರು ದಾಳಿ ನಡೆಸಿ ದಶರಥ ಕಾಂಬಳೆ, ರಾಚಯ್ಯ ಮಠಪತಿ, ರಾಜಕುಮಾರ ಕಾಂಬಳೆ, ಸತೀಶ್ ತಿವಾರಿ, ಆರೀಫ್ ಮಿಯ್ಯಾ, ಶಿವಶರಣಪ್ಪ ಸಾಗರ, ವೀರಣ್ಣಾ ಸಂಗಾಣಿ ಎಂಬುವವರನ್ನು ಬಂಧಿಸಿ 5 ಸಾವಿರ ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

ವಿಶ್ವವಿದ್ಯಾಲಯ ಮತ್ತು ಸಬ್–ಅರ್ಬನ್ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಯುವ ಮಾರ್ಗ
www.yuvamarga.com Yuva Marga yuva_marga_

# ಫೆ. 1 ಕೇಂದ್ರ ಬಜೆಟ್ ಮಂಡನೆ



**ನವದೆಹಲಿ, ಜ.8:** ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ಜನವರಿ 28 ಮತ್ತು ಕೇಂದ್ರ ಬಜೆಟ್ ಮಂಡನೆಗೆ ಫೆಬ್ರವರಿ 1 ಅನ್ನು ತಾತ್ಕಾಲಿಕ ಪ್ರಾರಂಭದ ದಿನಾಂಕವಾಗಿ ಪ್ರಸ್ತಾಪಿಸಲು ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ.

ಬಜೆಟ್ ಅಧಿವೇಶನವು ಕ್ಯಾಲೆಂಡರ್ ವರ್ಷದ ಮೊದಲ ಸಂಸದೀಯ ಅಧಿವೇಶನವಾಗಿದ್ದು, ಸಾಂಪ್ರದಾಯಿಕವಾಗಿ ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನ 'ವನ್ನುದ್ದೇಶಿಸಿ ರಾಷ್ಟ್ರಪತಿ ಅವರು ಭಾಷಣದೊಂದಿಗೆ ಪ್ರಾರಂಭವಾಗುತ್ತದೆ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

ಹಲವು ವರ್ಷಗಳಿಂದ ಫೆಬ್ರವರಿ 1ರಂದು ಕೇಂದ್ರ ಬಜೆಟ್ ಮಂಡನೆಯಾಗುತ್ತಿದೆ. ಈ ವರ್ಷ, ಫೆಬ್ರವರಿ 1 ಭಾನುವಾರದಂದು ಬರುತ್ತದೆ ಮತ್ತು ಹಣಕಾಸು ಪ್ರಕ್ರಿಯೆಗಳಲ್ಲಿ ಊಹಿಸುವಿಕೆಯನ್ನು ಕಾಪಾಡಿಕೊಳ್ಳಲು ಸರ್ಕಾರವು ದಿನಾಂಕವನ್ನು ಉಳಿಸಿಕೊಳ್ಳುವ ಬಲವಾದ ಸಾಧ್ಯತೆಯಿದೆ ಎಂದು ಮೂಲಗಳು ಸೂಚಿಸಿವೆ.

ಬಜೆಟ್ ಅಧಿವೇಶನವು ಸಾಮಾನ್ಯವಾಗಿ ಎರಡು ಹಂತಗಳಲ್ಲಿ ನಡೆಯುತ್ತದೆ, ವಿವಿಧ ಸಚಿವಾಲಯಗಳ ಅನುದಾನದ ಬೇಡಿಕೆಗಳನ್ನು ಪರಿಶೀಲಿಸಲು ಸಂಸದೀಯ ಸ್ಥಾಯಿ ಸಮಿತಿಗಳಿಗೆ ಅವಕಾಶ ನೀಡಲಾಗುತ್ತದೆ.

ಜನವರಿ 28 ಮತ್ತು ಜನವರಿ 31ರಂದು ಬಜೆಟ್ ಅಧಿವೇಶನದ ಪ್ರಾರಂಭಕ್ಕೆ ಎರಡು ಸಂಭವನೀಯ ದಿನಾಂಕಗಳ ಬಗ್ಗೆ ಸಿಸಿಪಿಎ ಚರ್ಚಿಸಿದೆ ಮತ್ತು ಶೀಘ್ರದಲ್ಲೇ ಅಂತಿಮ ನಿರ್ಧಾರವನ್ನು ನಿರೀಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಬಜೆಟ್ ಅಧಿವೇಶನವು ಸಾಮಾನ್ಯವಾಗಿ ಜನವರಿ ಕೊನೆಯ ವಾರದಲ್ಲಿ ಪ್ರಾರಂಭವಾಗುತ್ತದೆ.

2017 ರಲ್ಲಿ, ಕೇಂದ್ರ ಬಜೆಟ್ ಅನ್ನು ಫೆಬ್ರವರಿ 1ಕ್ಕೆ ಒಂದು ತಿಂಗಳು ಮುಂದೂಡಲಾಯಿತು, ಇದು ಹಣಕಾಸಿನ ಆಡಳಿತವನ್ನು ಸುಧಾರಿಸುವ ವ್ಯಾಪಕ ಪ್ರಯತ್ನದ ಭಾಗವಾಗಿ ವೆಚ್ಚದ ಚಕ್ರವನ್ನು ಎರಡು ತಿಂಗಳು ಮುಂದಕ್ಕೆ ತಂದಿತು.

ಚಳಿಗಾಲದ ಅಧಿವೇಶನದಂತೆಯೇ, ಬಜೆಟ್ ಅಧಿವೇಶನವು ಹಲವಾರು ಮಸೂದೆಗಳನ್ನು ಪರಿಚಯಿಸುವ ನಿರೀಕ್ಷೆಯಿದೆ ಮತ್ತು ವ್ಯಾಪಕವಾದ ಶಾಸಕಾಂಗ ವ್ಯವಹಾರವನ್ನು ನೋಡುವ ನಿರೀಕ್ಷೆಯಿದೆ.ಮುಂದಿನ ವಾರಗಳಲ್ಲಿ ಸಂಸದೀಯ ವೇಳಾಪಟ್ಟಿಯು ತುಂಬಿರುವ ನಿರೀಕ್ಷೆಯಿದೆ. ಭಾರತವು ಮುಂದಿನ ತಿಂಗಳು ಎಐ ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸಲಿದೆ, ಅದೇ ಅವಧಿಯಲ್ಲಿ ಸರ್ಕಾರದ ಬದ್ಧತೆಗಳನ್ನು ಹೆಚ್ಚಿಸುತ್ತದೆ.

ಪ್ರಸ್ತುತ ಬಜೆಟ್ ವೇಳಾಪಟ್ಟಿಯು 2017 ರ ಫೆಬ್ರವರಿ 1ರ ಹಿಂದಿನದು. ಆಗ ಕೇಂದ್ರ ಬಜೆಟ್ ಮಂಡನೆಯನ್ನು ಒಂದು ತಿಂಗಳು ಮತ್ತು ವೆಚ್ಚದ ಚಕ್ರವನ್ನು ಎರಡು ತಿಂಗಳು ಮುಂದೂಡಲಾಯಿತು. ಈ ಬದಲಾವಣೆಯು ಹಣಕಾಸಿನ ಆಡಳಿತವನ್ನು ಸುಧಾರಿಸುವ ಮತ್ತು ಸರ್ಕಾರದ ವೆಚ್ಚವನ್ನು ಸಮಯೋಚಿತವಾಗಿ ಹೊರತರುವುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿತ್ತು.

ಇತ್ತೀಚೆಗೆ ಮುಕ್ತಾಯಗೊಂಡ ಚಳಿಗಾಲದ ಅಧಿವೇಶನದಂತೆ, ಬಜೆಟ್ ಅಧಿವೇಶನವು ಬಜೆಟ್ ಜತೆಗೆ ಹಲವಾರು ಮಸೂದೆಗಳು ಮತ್ತು ವಿವರವಾದ ಶಾಸಕಾಂಗ ಚರ್ಚೆಗಳಿಗೆ ಸಾಕ್ಷಿಯಾಗುವ ಸಾಧ್ಯತೆಯಿದೆ

ನರೇಂದ್ರ ಮೋದಿ ಸರ್ಕಾರದ ಅವಧಿಯಲ್ಲಿ ವಾರಾಂತ್ಯದ ಬಜೆಟ್ ಮಂಡನೆಯು ಅಭೂತಪೂರ್ವವಾಗಿಲ್ಲ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಳೆದ ವರ್ಷ ಶನಿವಾರ ಬಜೆಟ್ ಮಂಡಿಸಿದ್ದರು.ಇದಕ್ಕೂ ಮುನ್ನ ಅರುಣ್ ಜೇಟ್ಲಿ ಅವರು ಫೆಬ್ರವರಿ 28ರಂದು 2015 ಮತ್ತು 2016 ರ ಕೇಂದ್ರ ಬಜೆಟ್ ಮಂಡಿಸಿದ್ದರು.

## ಎಚ್‌ಡಿಕೆಯಿಂದ ಪಾಠ ಕಲಿಯುವ ಅಗತ್ಯವಿಲ್ಲ : ಡಿಕೆಶಿ ತಿರುಗೇಟು



ಬೆಂಗಳೂರು, ಜ.8– ಸಚಿವಾಗಿ ನನಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗಿಂತ ಹೆಚ್ಚಿನ ಅನುಭವ ಇದೆ. ಯಾರ ಜತೆ ಸಭೆ ನಡೆಸಬೇಕು, ಎಲ್ಲವೂ ನನಗೆ ಗೊತ್ತಿದೆ. ಕುಮಾರಸ್ವಾಮಿ ಅವರಿಂದ ನಾನು ಪಾಠ ಕಲಿಯುವ ಅವಶ್ಯಕತೆ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿಂದು ಜೆಡಿಎಸ್ ಮುಖಂಡರಾದ ಗೋವಿಂದರಾಜು ಹಾಗೂ ಅವರ ಪತ್ನಿ ಮಾಜಿ ಪಾಲಿಕೆ ಸದಸ್ಯೆ ಗೌರಮ್ಮ ಅವರ ಪಕ್ಷ ಸೇರ್ಪಡೆ ಸಂದರ್ಭದಲ್ಲಿ, ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಕ್ಕೆ ಟೀಕಿಸಿರುವ ಕುಮಾರಸ್ವಾಮಿ ಅವರ ಮಾತಿಗೆ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಅವರಿಗಿಂತ ಹೆಚ್ಚು ಕಾಲ ಸಚಿವನಾಗಿ ನಾನು ಕೆಲಸ ಮಾಡಿದ್ದೇನೆ. ಯಾರ ಜತೆ ಸಭೆ ಮಾಡಬೇಕು, ಯಾರನ್ನು ಸಭೆಗೆ ಕರೆಯಬೇಕು ಎಲ್ಲವೂ ಗೊತ್ತಿದೆ. ಅವರಿಂದ ಪಾಠ ಕಲಿಯುವ ಅಗತ್ಯವಿಲ್ಲ ಎಂದರು.

ಜೆಡಿಎಸ್‌ಗೆ ಒಂದು ಸಿದ್ಧಾಂತ, ಒಂದು ತತ್ವ ಯಾವುದೂ ಇಲ್ಲ. ಅದು ಒಂದು ರೀತಿ ವೈಯುಕ್ತಿಕ ಆಸ್ತಿ ತರ ಆಗಿದೆ. ಸದ್ಯದಲ್ಲೇ ಬಿಜೆಪಿ ಜತೆ ಜೆಡಿಎಸ್ ವಿಲೀನವಾಗುವ ಸಾಧ್ಯತೆಯೂ ಇದೆ ಎಂದು ಹೇಳಿದರು.

ರಾಜ್ಯದಲ್ಲಿ ಲೆಕ್ಕಕ್ಕೆ ಮೂರು ಪಕ್ಷ, ಆಟಕ್ಕೆ ಎರಡು ಪಕ್ಷ ಎನ್ನುವ ಹಾಗೆ ಆಗಿದೆ. ಆದಷ್ಟು ಬೇಗ ಜೆಡಿಎಸ್‌ನವರು ಬಿಜೆಪಿಯಲ್ಲಿ ವಿಲೀನವಾಗಲಿ. ಆಗ ರಾಜ್ಯದಲ್ಲಿ ಎರಡೇ ಪಕ್ಷ ಪ್ರಬಲವಾಗಿರುತ್ತವೆ. ರಾಜಕಾರಣ ಮಾಡಕ್ಕೂ, ಹೋರಾಟ ಮಾಡಕ್ಕೂ ಒಳ್ಳೆಯದಾಗುತ್ತದೆ. ಎರಡು ಪಕ್ಷ ಇದ್ದರೆ ರಾಜ್ಯಕ್ಕೂ ಒಳ್ಳೆಯದು ಎಂದರು.

ಈ ವರ್ಷ ಚುನಾವಣಾ ವರ್ಷ ಎಂದು ಎಲ್ಲರೂ ಭಾವಿಸಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆ ಇದೆ. ನಾವು ಅದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿದರು. ಬೆಂಗಳೂರು ಪಾಲಿಕೆ ಚುನಾವಣೆಯೂ ಬರುತ್ತಿದೆ. ಎಲ್ಲರಿಗೂ ಅರ್ಜಿ ಹಾಕಲು ಅವಕಾಶ ನೀಡಿ ದಿನಾಂಕವನ್ನೂ ನಿಗದಿ ಮಾಡಿದ್ದೇವೆ. 779 ಜನ ಅರ್ಜಿ ಹಾಕಿದ್ದಾರೆ. ತಾವು ಎಲ್ಲವನ್ನೂ ಪರಾಮರ್ಶೆ ಮಾಡಿ ಸರಿಯಾದ ಅಭ್ಯರ್ಥಿಯನ್ನು ಹಾಕುತ್ತೇವೆ ಎಂದರು.

ಈ ಸಂದರ್ಭದಲ್ಲಿ ಜಮೀರ್ ಅಹಮದ್ ಖಾನ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

## ವಿಕಲಚೇತನರಿಗೆ ತ್ರಿಚಕ್ರ ವಾಹನ ವಿವಿಧ ಸಲಕರಣೆಗಳ ವಿತರಣೆ



**ಹನೂರು ಜ 8 :–** ಪಟ್ಟಣದ ಲೋಕೋಪಯೋಗಿ ಇಲಾಖೆ ವಸತಿ ಗೃಹ ಆವರಣದಲ್ಲಿ ವಿಕಲಚೇತನ ಅರ್ಹ ಫಲಾನುಭವಿಗಳಿಗೆ ತ್ರಿಚಕ್ರ ವಾಹನ ಸೇರಿದಂತೆ ವಿವಿಧ ಸಲಕರಣೆಗಳನ್ನು ಶಾಸಕ ಎಂ.ಆರ್ ಮಂಜುನಾಥ್ ಅವರು ವಿತರಣೆ ಮಾಡಿದರು.

ಇದೆ ವೇಳೆ ಶಾಸಕ ಎಂ.ಆರ್ ಮಂಜುನಾಥ್ ಮಾತನಾಡಿ ಎಲ್ಲರಂತೆ ವಿಕಲಚೇತನರು ಸಹ ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ಆಸೆ ಇರುತ್ತದೆ. ಇವರರಿಗೆ ನೆರವು ಹಾಗೂ ಸಹಕಾರಿಯಾಗುವಂತೆ ವಿವಿಧ ಪರಿಕರಗಳನ್ನು ಇಲಾಖೆ ವತಿಯಿಂದ ವಿತರಣೆ ಮಾಡಲಾಗಿದೆ ಇದನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು ಇದೊಂದು ಬೆಳವಣಿಯಾಗಿದೆ ಎಂದರು.

ಇದೀಗ ಹನೂರಿನಲ್ಲಿ ವಿತರಣೆ ಯಾಗಿರುವ ವಿವಿಧ ಸಲಕರಣೆಗಳು ಜಿಲ್ಲೆಯಾದ್ಯಂತ ಇರುವ ಅರ್ಹ ವಿಕಲಚೇತನರಿಗು ಸಹಾದಕ್ಕ ಬೇಕಾಗಿದೆ ಮುಂದಿನ ದಿನಗಳಲ್ಲಿ ಹನೂರು ವಿಧಾನಸಭಾ ಕ್ಷೇತ್ರದ ಅರ್ಹ ಫಲಾನುಭವಿಗಳಿಗೆ ಮತ್ತಷ್ಟು ಪರಿಕರಗಳನ್ನು ಒದಗಿಸಿಕೊಡಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಮಯದಲ್ಲಿ ಜಿಲ್ಲಾ ವಿಕಲಚೇತನರ ಕಲ್ಯಾಣಧಿಕಾರಿ. ಡಾ ಕೆ ಎನ್ ಮಂಜುನಾಥ್, ಹಾಗೂ ಮುಖಂಡರುಗಳಾದ ಮಂಜೇಶ್ ಗೌಡ, ಚಿನ್ನವೆಂಕಟ್, ಮಹದೇವ್, ಅಮೀನ್, ನಟರಾಜುಗೌಡ, ಗೋವಿಂದ,ರಾಚಪ್ಪ, ಶಿವು, ವೆಂಕಟೇಶ್, ಪ್ರಸನ್ನ, ಸೇರಿದಂತೆ ಇನ್ನಿತರರು ಇದ್ದರು.

## ಆಹಾರ ಸಂಸ್ಕರಣಾ ತರಬೇತಿ ಕೇಂದ್ರ ಉಧ್ಘಾಟನೆ



**ದೊಡ್ಡಬಳ್ಳಾಪುರ,ಜ,8–** ಈ ಉಪಕ್ರಮವು ಅರಿವು, ಕೌಶಲ್ಯ ಅಭಿವೃದ್ಧಿ ತರಬೇತಿ ಹಾಗೂ ಉದ್ಯಮ ಬೆಂಬಲವನ್ನು ಒದಗಿಸುವ ಮೂಲಕ ಭಾಗವಹಿಸುವವರಿಗೆ ಸ್ವಾವಲಂಬಿ ಜೀವನಕ್ಕೆ ದಾರಿ ಮಾಡಿಕೊಡುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದು ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ಮಹಾ ಪ್ರಬಂಧಕ ಡಾ. ರವಿಕಾಂತ್ ಗುಪ್ತ ಅಭಿಪ್ರಾಯಪಟ್ಟರು.

ಭಾರತೀಯ ವ್ಯವಸ್ಥಾಪಕತಾ ಶಿಕ್ಷಣ ಅಭಿವೃದ್ಧಿ ಸಂಸ್ಥೆ ಹಾಗೂ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ರವರ ಸಿ.ಎಸ್.ಆರ್ ಪ್ರಾಯೋಜಕತ್ವದ ಸಹಯೋಗದೊಂದಿಗೆ ದೊಡ್ಡಬಳ್ಳಾಪುರ ನಗರದಲ್ಲಿ ಆಹಾರ ಸಂಸ್ಕರಣಾ ತರಬೇತಿ ಕೇಂದ್ರ ಉಧ್ಘಾಟನಾ ಕಾರ್ಯಕ್ರಮ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಡೆಸಲಾದ ಸೂಕ್ಷ್ಮ ಕೌಶಲ್ಯ ಉದ್ಯಮಶೀಲತೆಯ ಕಾರ್ಯಕ್ರಮದ ಫಲಾನುಭವಿಗಳಿ ಪ್ರಮಾಣ ಪತ್ರ ವಿತರಣ ಕಾರ್ಯಕ್ರಮದಲ್ಲಿ ಆಹಾರ ಸಂಸ್ಕರಣಾ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ಕೃಷಿ, ಆಹಾರ ಸಂಸ್ಕರಣೆ, ರೇಷ ಕೃಷಿ, ಸೆಣಬಿನ ಚೀಲ ತಯಾರಿಕೆ, ಸೌಂದರ್ಯ ಆರೈಕೆ ಹಾಗೂ ವಿವಿಧೋದ್ದೇಶ ಯಾಂತ್ರಿಕ ವ್ಯಾಪಾರಗಳಂತಹ ವೈವಿಧ್ಯಮಯ ಕ್ಷೇತ್ರಗಳಲ್ಲಿ ತಾಂತ್ರಿಕ ತರಬೇತಿಯನ್ನು ನೀಡುವ ಮೂಲಕ ಫಲಾನುಭವಿಗಳಿಗೆ ಸ್ಥಿರ ಜೀವನೋಪಾಯ ಕಲ್ಪಿಸಲಾಗು ತ್ತಿದೆ. ಇದರಿಂದ ಗ್ರಾಮೀಣ ಪ್ರದೇಶದ ಯುವಕರು ಮತ್ತು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಕಾರ ದೊರೆಯುತ್ತಿದೆ ಎಂದು ಹೇಳಿದರು. ಜಿಲ್ಲೆಯ ಮಹಿಳೆಯರು ಆರ್ಥಿಕ ಸಬಲೀಕರಣದತ್ತ ಸಾಗುತ್ತಿರುವುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಮಹಿಳೆಯರು ಉದ್ಯಮಶೀಲತೆಯಲ್ಲಿ ತೊಡಗಿಸಿಕೊಂಡರೆ ಕಡಿಮೆ ಅವಧಿಯಲ್ಲಿ ಗುರಿ ಸಾಧಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹೇಳಿದರು. ಜಾರಿಯಲ್ಲಿರುವ ಯೋಜನೆಗಳನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯವಾಗುತ್ತದೆ ಎಂದರು. ನವ ಉದ್ಯಮಿಗಳ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನ ಹೆಚ್ಚುವರಿ ಜನರಲ್ ಮ್ಯಾನಜೇರ್ ಸಿ.ಕೆ. ಮಂಜುನಾಥ್ ಮಾತನಾಡಿ ರಾಜ್ಯದಲ್ಲಿ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಯುವಕರು ಮತ್ತು ಮಹಿಳೆಯರ ಸಬಲೀಕರಣ ದೊಂದಿಗೆ ಮಹಿಳಾ ಉದ್ಯೋಗಾವಕಶ ಕಲ್ಪಿಸಲಾಗುತ್ತಿದೆ, ಸಬಲೀಕರಣಕ್ಕೆ ಉದ್ಯಮಶೀಲತೆ ಬಹುಮುಖ್ಯ ಅಡಿಗಲ್ಲು ಎಂದರು. ತಾವು ಕಲಿತು ಇನ್ನಷ ಜನಕ್ಕೆ ಕೌಶಲ್ಯ ನೀಡಿ ಉದ್ಯೋಗ ಕಲ್ಪಿಸಬೇಕೆಂದರು ನವ ಉದ್ಯಮಿಗಳೊಂದಿಗೆ ಸಂವಾದ ನಡೆಸಿದ ಅವರು ಉದ್ಯಮಶೀಲರನ್ನು ಪ್ರಶಂಸಿದರು ಹಾಗೂ ಭವಿಷದ ದಿನಗಳಲ್ಲಿ ಶುಭವಾಗಲಿ ಎಂದರು.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ಹೆಚ್ಚುವರಿ ಜನರಲ್ ಮ್ಯಾನೇಜರ್ ಸಿ.ಕೆ. ಮಂಜುನಾಥ್ ಮಾತನಾಡಿ, ರಾಜ್ಯದ ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಯುವಕರು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ವಿವಿಧ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಪರಿಣಾಮ ಕಾರಿಯಾಗಿ ಅನುಷನ ಗೊಳಿಸಲಾಗುತ್ತಿದೆ ಎಂದರು. ವಿಶೇಷ ವಾಗಿ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ಇಂತಹ ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳು ಮಹತ್ವದ ಪಾತ್ರ ವಹಿಸುತ್ತಿವೆ ಎಂದು ಹೇಳಿದರು. ಸಬಲೀಕರಣಕ್ಕೆ ಉದ್ಯಮಶೀಲತೆ ಅತ್ಯಂತ ಪ್ರಮುಖ ಅಡಿಗಲ್ಲಾಗಿದ್ದು, ಸ್ವಾವಲಂಬಿ ಜೀವನಕ್ಕೆ ಉದ್ಯಮ ಆರಂಭಿಸುವುದು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ತರಬೇತಿ ಪಡೆಯುವವರು ಇಲ್ಲಿ ಕಲಿತ ಕೌಶಲ್ಯಗಳನ್ನು ತಮ್ಮ ಮಟ್ಟಿಗೆ ಮಾತ್ರ ಸೀಮಿತಗೊಳಿಸದೇ, ಇನ್ನಷ ಜನರಿಗೆ ಹಂಚಿಕೊಂಡು ಅವರಿಗೆ ಉದ್ಯೋಗ ಕಲ್ಪಿಸುವ ರೀತಿಯಲ್ಲಿ ಮುಂದುವರಿಯಬೇಕು ಎಂದು ಸಲಹೆ ನೀಡಿದರು.

ಉದ್ಯಮಿಗಳೊಂದಿಗೆ ಸಂವಾದ ನಡೆಸಿದ ಅವರ ಉತ್ಸಾಹ, ಪರಿಶ್ರಮ ಮತ್ತು ಸಾಧನೆಯನ್ನು ಪ್ರಶಂಸಿಸಿ, ಇಂತಹ ಪ್ರಯತ್ನಗಳು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಸಹಕಾರಿಯಾಗುತ್ತವೆ ಎಂದರು. ಮುಂದಿನ ದಿನಗಳಲ್ಲಿ ಎಲ್ಲಾ ಉದ್ಯಮಿಗಳಿಗೆ ಯಶಸ್ಸು, ಪ್ರಗತಿ ಮತ್ತು ಸಮೃದ್ಧಿ ದೊರಕಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಯೋಜನ ಸಂಯೋಜಕ ಪ್ರವೀಣ್ ಕುಮಾರ್. ಎಸ್, ನವೀನ್ , ಕೆನರಾ ಬ್ಯಾಂಕ್ ಆರ್ಥಿಕ ಸಲಹೆಗಾರ ಸಂಪತ್ ಸಿಬ್ಬಂದಿಗಳಾದ ಅಪರ್ಣಾ, ಸುನೀತ, ಕೃಷ್ಣವೇಣಿ, ಅನುರಾದ, ಜಯಲಕ್ಷೀ ಭಾಗವಹಿಸಿದ್ದರು.

## ಜ.12 ರಿಂದ ಹಾಲು ಮತ ಪೂಜಾರಿಗಳಿಗೆ ತರಬೇತಿ



**ಬಾದಾಮಿ,8:** ಜ. 12 ರಿಂದ ಮೂರು ದಿನಗಳ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠದ ತಿಂಥಣಿ ಬ್ರಿಡ್ಜ್ ನಲ್ಲಿ ಹಾಲುಮತ ಪೂಜಾರಿಗಳಿಗೆ ತರಬೇತಿ ಶಿಬಿರ ಹಾಗೂ ಹಾಲುಮತ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಹನಮಂತ ಅಪ್ಪನ್ನವರ ಮತ್ತು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಿ.ಬಿ.ಸಿದ್ದಾಪೂರ ತಿಳಿಸಿದರು.

ಬುಧವಾರ ನಗರದ ಕಾನಿಪ ಭವನದಲ್ಲಿ ಕರೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.ಪ್ರತಿ ವರ್ಷದಂತೆ ಈ ವರ್ಷವೂ ಜ 12, 13 ಮತ್ತು 14 ರಂದು ಮೂರು ದಿನಗಳ ಶ್ರೀ ಮಠದಲ್ಲಿ ಪ್ರತಿವರ್ಷ ಹಾಲುಮತ ಸಂಸ್ಕೃತಿ ವೈಭವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿತ್ತು. ಹಿಂದಿನ ವಷರ್ಷ ತಿಳಿಸಿದಂತೆ ಈ ವರ್ಷ ಹಾಲುಮತ ಧರ್ಮದ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಮೂರು ದಿನಗಳ ಕಾರ್ಯಕ್ರಮವನ್ನು ರಾಜಕೀಯೇತರವಾಗಿ ಆಯೋಜಿಸಲಾಗಿದೆ.

ಶ್ರೀ ಬೀರದೇವರು, ಶ್ರೀ ರೇವಣಸಿದ್ದೇಶ್ವರರ, ಶ್ರೀ ಮೈಲಾರಲಿಂಗೇಶ್ವರ, ಶ್ರೀ ಮಾಳಿಂಗರಾಯ ಶ್ರೀ ಅಮೋಘಸಿದ್ದೇಶ್ವರರ ದೇವಸ್ಥಾನಗಳ ಪೂಜಾರಿಗಳು ಯಾವುದೇ ಪೂಜಾ ಪದ್ಧತಿ ಗೊತ್ತಿಲ್ಲದ ಕಾರಣ, ಭಕ್ತರು ದೇವಸ್ಥಾನಗಳ ಒಡನಾಟವನ್ನು ಬಿಡುತ್ತಿದ್ದಾರೆ ಮತ್ತು ಇತರೆ ದೇವಸ್ಥಾನಗಳಿಗೆ ಮಾರು ಹೋಗುತ್ತಿದ್ದಾರೆ. ಪೂಜಾರಿಗಳಿಗೆ ಪೂಜಾ ಪದ್ಧತಿ ಮತ್ತು ಮಂತ್ರಗಳನ್ನು ಕಲಿಸುವ ಉದ್ದೇಶದಿಂದ ಈ ವರ್ಷ ಮೂರುದಿನಗಳ ಕಾಲ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದ, ವಿಶೇವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಕುರುಬ ಸಮುದಾಯದ ಪೂಜಾರಿಗಳು ಈ ಶಿಬಿರದಲ್ಲಿ ಪಾಲ್ಗೊಳ್ಳಲು ಕೇಳಿಕೊಳ್ಳುತ್ತೇವೆ. ಕುರುಬ ಸಮುದಾಯದ ಮುಖಂಡರು ತಮ್ಮ ದೇವಸ್ಥಾನದ ಪೂಜಾರಿಗಳನ್ನು ಶಿಬಿರಕ್ಕೆ ಕರೆತರುವ ಸೇವೆಯನ್ನು ಮಾಡಬೇಕಿದೆ. ಅಲ್ಲದೆ, ಮೂರೂ ದಿನಗಳ ಕಾಲ ಹಾಲುಮತ ಧರ್ಮದ ಬಗ್ಗೆ, ವಿವಿಧ ದೇವರ, ಸಿದ್ದಪುರುಷರ ಬಗ್ಗೆ, ಸಾಹಿತ್ಯ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದರು.

ಬಾದಿಮನಾಳ ಹಾಲವರ್ತಿ ಕನಕ ಗುರುಪೀಠ ಶಾಖಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ ಮಾತನಾಡಿ ಶಿಬಿರದಲ್ಲಿ ಹಲವು ಪೂಜ್ಯರು, ಉಪಕುಲಪತಿಗಳು, ವಾಗ್ಮಿ ಗಳು, ಸಂಶೋಧಕರು, ಉಪನ್ಯಾಸಕರು, ಕಲಾವಿದರು ಆಗಮಿಸುವ ಮೂರುದಿನಗಳ ಶಿಬಿರ ಮತ್ತು ಸಮ್ಮೇಳನಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು.

ಪೂಜಾರಿಗಳ ಶಿಬಿರದಲ್ಲಿ ಮತ್ತು ಸಾಹಿತ್ಯ ಸಮಾವೇಶದಲ್ಲಿ ಪಾಲ್ಗೊಳ್ಳುವ ಆಸಕ್ತರು ಮೊ:8095325158 ಸಂಪರ್ಕಿಸಿ ಭಕ್ತಾದಿಗಳು ಹೆಸರು ನೋಂದಾಯಿಸಬಹುದು.

ಮಹಾ ಶಿವರಾತ್ರಿ ಜಾಗರಣೆ ಫೆ.15 ರಂದು ಶ್ರೀ ಮಠದಲ್ಲಿ ಸರ್ವ ಧರ್ಮ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ವಿವಾಹ ಮಾಡಬಯಸುವವರು ಫೆ.10 ರೊಳಗೆ ಮಠದಲ್ಲಿ ಹೆಸರು ನೋಂದಣಿ ಮಾಡಿಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡ ಮಲ್ಲು ವಡಗೇರಿ ಹಾಜರಿದ್ದರು.

# ಭಾರತೀಯ ಉತ್ಪನ್ನಗಳಿಗೆ ಶೇ. 500 ಸುಂಕ: ಟ್ರಂಪ್

**ವಾಷಿಂಗ್ಟನ್, ಜ.8–** ರಷ್ಯಾದಿಂದ ಭಾರತ ತೈಲ ಖರೀದಿ ಮಾಡುತ್ತಿರುವುದನ್ನು ವಿರೋಧಿಸಿ ಭಾರತದ ಉತ್ಪನ್ನಗಳ ಮೇಲೆ ಮೇಲೆ ಶೇಕಡಾ 50 ರಷ್ಟು ಸುಂಕ ವಿಧಿಸುವ ಮೂಲಕ ಸುಂಕದ ಯುದ್ಧ ಘೋಷಿಸಿದ್ದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವಂತೆ ಹೇಳಿದ್ದರೂ ಭಾರತ ಜಗ್ಗದ ಹಿನ್ನೆಲೆಯಲ್ಲಿ ಈಗ ಶೇಕಡಾ 500 ರಷ್ಟು ಸುಂಕ ವಿಧಿಸಲು ಮುಂದಾಗಿದ್ದಾರೆ.ಭಾರತದ ಉತ್ಪನ್ನಗಳ ಮೇಲೆ ಶೇಕಡಾ 500 ರಷ್ಟು ಸುಂಕ ವಿಧಿಸುವ ಅಧಿಕಾರ ನೀಡುವ ಮಸೂದೆಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮತಿ ನೀಡಿದ್ದಾರೆ. ಇದರಿಂದ ಭಾರತದ ಉತ್ಪನ್ನಗಳು ಮತ್ತಷ್ಟು ದುಬಾರಿಯಾಗಲಿದ್ದು ಭಾರತದ ಮೇಲೆ ಬಾರಿ ಪರಿಣಾಮ ಬೀರುವುದು ಖಚಿತವಾಗಿದೆ.ರಷ್ಯಾದ ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಭಾರಿ ಸುಂಕ ವಿಧಿಸಲು ಅವಕಾಶ ನೀಡುವ ಹೊಸ ಮಸೂದೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನುಮೋದಿಸಿದ್ದಾರೆ. '2025 ರ ರಷ್ಯಾ ಕಾಯ್ದೆಯನ್ನು ಮಂಜೂರು ಮಾಡುವುದು' ಎಂಬ ಮಸೂದೆಯು "ತಿಳಿದಿದ್ದೂ ವಿನಿಮಯದಲ್ಲಿ ತೊಡಗಿಸಿಕೊಳ್ಳುವ" ದೇಶಗಳ ಮೇಲೆ ಕನಿಷ್ಠ ಶೇಕಡಾ 500ಸುಂಕ ವಿಧಿಸುವ ಮಸೂದೆ ಇದಾಗಿದೆ.ಈ ಮಸೂದೆ ಸೆನೆಟ್‌ನಲ್ಲಿ ಅಂಗೀಕಾರವಾದರೆ ಆದರೆ ರಷ್ಯಾದ ತೈಲ ಅಥವಾ ಯುರೇನಿಯಂ ಅನ್ನು ಉದ್ದೇಶಪೂರ್ವಕವಾಗಿ ಖರೀದಿಸುವ ರಾಷ್ಟ್ರಗಳ ಮೇಲೆ ಶೇಕಡಾ 500 ರಷ್ಟು ಸುಂಕವನ್ನು ವಿಧಿಸಲು ಅಮೆರಿಕ ಅಧ್ಯಕ್ಷರಿಗೆ ಅಧಿಕಾರ ನೀಡುತ್ತದೆ. ರಷ್ಯಾವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಈ ಮಸೂದೆಯನ್ನು ಅಮೆರಿಕ ಸಿದ್ಧಪಡಿಸಿದೆ. ಮಸೂದೆ ಅಂಗೀಕಾರವಾಗಿದರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಭಾರತ, ಚೀನಾ, ಬ್ರೆಜಿಲ್ ಮೇಲೆ ಅಮೆರಿಕ ಭಾರೀ ಪ್ರಮಾಣದ ತೆರಿಗೆ ವಿಧಿಸುವ ಸಾಧ್ಯತೆಯಿದೆ. ರಿಪಬ್ಲಿಕನ್ ಪಕ್ಷದ ಸೆನೆಟರ್ ಗ್ರಹಾಂ ಬಿಲ್ ಈ ಮಸೂದೆಯ ಬಗ್ಗೆ ಟ್ರಂಪ್ ಜೊತೆ ಸಭೆ ನಡೆಸಿದ್ದಾರೆ. ವಿವಿಧ ವಿಷಯಗಳ ಕುರಿತು ಡೊನಾಲ್ಡ್ ಟ್ರಂಪ್ ಅವರೊಂದಿಗೆ ಸಭೆ ನಡೆಸಲಾಗಿದೆ. ಈ ಸಂದರ್ಭದಲ್ಲಿ ದ್ವಿಪಕ್ಷೀಯ ರಷ್ಯಾ ನಿರ್ಬಂಧ ಮಸೂದೆ ಮಂಡಿಸಲು ಅವರು ಹಸಿರು ನಿಶಾನೆ ನೀಡಿದ್ದಾರೆ ಎಂದು ಹೇಳಿದ್ದಾರೆಈ ಮಸೂದೆಯು ಚೀನಾ, ಭಾರತ ಮತ್ತು ಬ್ರೆಜಿಲ್‌ನಂತಹ ದೇಶಗಳ ವಿರುದ್ಧ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಭಾರೀ ಪ್ರಮಾಣದ ತೆರಿಗೆ ವಿಧಿಸಲು ಅನುಮತಿ ನೀಡುತ್ತದೆ. ತೈಲವನ್ನು ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಪುಟಿನ್ ರಕ್ತಪಾತಕ್ಕೆ ಹಣಕಾಸು ಒದಗಿಸುತ್ತದೆ. ಮುಂದಿನ ವಾರದ ಆರಂಭದಲ್ಲಿ ನಡೆಯುತ್ತಿರುವ ಮತದಾನಕ್ಕೆ ಎದುರು ನೋಡುತ್ತಿದ್ದೇನೆ ಎಂದು ಹೇಳಿದ್ದಾರೆ.ಅಧಿಕಾರಕ್ಕೆ ಬರುವ ಮೊದಲೇ ಡೊನಾಲ್ಡ್ ಟ್ರಂಪ್ ಅವರು ರಷ್ಯಾ ಉಕ್ರೇನ್ ಯುದ್ಧವನ್ನು ನಿಲ್ಲಿಸುತ್ತೇನೆ ಎಂದು ಆಶ್ವಾಸನೆ ನೀಡಿದ್ದರು. ಆದರೆ ಇಲ್ಲಿಯವರೆಗೆ ಹಲವು ಸುತ್ತಿನ ಮಾತುಕತೆ ನಡೆದರೂ ಯುದ್ಧ ಮಾತ್ರ ನಿಲ್ಲುತ್ತಿಲ್ಲ. ಈಗ ಯುದ್ಧ ನಿಲ್ಲಿಸಲು ಟ್ರಂಪ್ ರಷ್ಯಾ ಮಿತ್ರ ದೇಶಗಳ ಮೇಲೆ ತೆರಿಗೆ ಬೆದರಿಕೆ ಹಾಕಲು ಮುಂದಾಗಿದ್ದಾರೆ.

ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಏರಿದ ಆರಂಭದಲ್ಲಿ ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ 25% ಸುಂಕ ವಿಧಿಸಿದ್ದರು. ಬಳಿಕ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡುತ್ತಿರುವುದಕ್ಕೆ ಪ್ರತಿಯಾಗಿ ಶೇಕಡಾ 25 ರಷ್ಟು ದಂಡದ ರೂಪದಲ್ಲಿ ಸುಂಕ ಹೇರಿದ್ದಾರೆ.ಭಾರತ ಮತ್ತು ಅಮೆರಿಕದ ಮಧ್ಯೆ ವ್ಯಾಪಾರ ಒಪ್ಪಂದ ಮಾತುಕತೆ ನಡೆಯುತ್ತಿದ್ದರೂ ಇಲ್ಲಿಯವರಗೆ ಯಾವುದೇ ಸಹಿ ಬಿದ್ದಿಲ್ಲ. ಅಮೆರಿಕ ಡೈರಿ ಮತ್ತು ಕೃಷಿ ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡಲು ಅನುಮತಿ ನೀಡಬೇಕೆಂದು ಬೇಡಿಕೆ ಇರಿಸಿದೆ. ಆದರೆ ಕೇಂದ್ರ ಸರ್ಕಾರ ಈ ಬೇಡಿಕೆಗೆ ಒಪ್ಪಿಗೆ ನೀಡದ ಕಾರಣ ಮಾತುಕತೆ ನಡೆಯುತ್ತಲೇ ಇದೆ. ಭಾರತದ ಉತ್ಪನ್ನಗಳ ಮೇಲೆ ಶೇಕಡಾ 500 ರಷ್ಟು ಸುಂಕ ವಿಧಿಸುವ ಮಸೂದೆಗೆ ಅಮೆರಿಕಾ ಸಮ್ಮತಿಈ ಮೂಲಕ ಭಾರತದ ವಿರುದ್ಧ ಸುಂಕಾಸ್ತ್ರ ಸಾರಿದ ಡೊನಾಲ್ಡ್ ಟ್ರಂಪ್‌ರಷ್ಯಾದಿಂದ ತೈಲ ಖರೀದಿ ಮಾಡದಂತೆ ಭಾರದ ಮೇಲೆ ಅಮೆರಿಕಾ ನಿರಂತರ ಒತ್ತಡಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತಹ ಕೇಳದ ಭಾರತವಿವಿಧ ಉತ್ಪನ್ನಗಳ ಮೇಲೆ ಸುಂಕ ವಿಧಿಸುವ ಅಮೆರಿಕಾ ನಿರ್ಧಾರದಿಂದ ಭಾರತಕ್ಕೆ ಮತ್ತೊಮ್ಮೆ ಹೊಡೆತ

ಯುವ ಮಾರ್ಗ
www.yuvamarga.com Yuva Marga yuva_marga_

# ಅರಕೇರಾ ತಾಲೂಕಿಗೆ ಈಡಿಗ ಸಮಾಜದ ಅಧ್ಯಕ್ಷರು ಪದಾಧಿಕಾರಿಗಳು ನೇಮಕ



ಯುವಮಾರ್ಗ ಸುದ್ದಿ

**ಅರಕೇರ,ಜ.8–** ತಾಲೂಕಿನ ನೂತನ ಆರ್ಯ ಈಡಿಗ ಸಮಾಜದ ಅಧ್ಯಕ್ಷರಾಗಿ ಶ್ರೀ ರಾಚಣ್ಣ ಗಣೇಕಲ್, ಪ್ರಧಾನ ಕಾರ್ಯದರ್ಶಿಯಾಗಿ ಮಹಾದೇವಪ್ಪ ನಾಗೋಲಿಯನ್ನು ಗುರುವಾರ ನಾಗೋಲಿ ಗ್ರಾಮದ ಶ್ರೀ ಹನುಮಯ್ಯಪ್ಪ ತಾತಾ ಮಠದ ಆವರಣದಲ್ಲಿ ಸೇರಿದ್ದ ಸಭೆಯಲ್ಲಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ರಾಮಚಂದ್ರ ಆಕಳಕುಂಪಿ, ಹನುಮಯ್ಯ ಕೊತ್ತದೊಡ್ಡಿ, ರಾಮು ಮಲ್ಲೇದೇವರಗುಡ್ಡ, ರಂಗಪ್ಪ ಭೂಮನಗುಂಡ, ಸಂಘಟನೆ ಕಾರ್ಯದರ್ಶಿಯಾಗಿ ನಾಗರಾಜ ಜಾಡಲದಿನ್ನಿ, ಖಜಾಂಚಿಯಾಗಿ ಬಸವರಾಜ ಜಾಗಟಗಲ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ನರಸಯ್ಯ ಜೇರದಬಂಡಿ, ಹನುಮಂತ ನಾಗೋಲಿ, ಹುಸೇನಯ್ಯ ಜುಟಮರಡಿ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಆರ್ಯ ಈಡಿಗ ಸಮಾಜದ ಗೌರವಾಧ್ಯಕ್ಷ ಚನ್ನಯಪ್ಪ ತಾತಾ ನಾಗೋಲಿ, ಜಿಲ್ಲಾಧ್ಯಕ್ಷ ಶ್ರೀ ನರಸನಗೌಡ ಶಕ್ತಿನಗರ, ಜಿಲ್ಲಾ ಉಪಾಧ್ಯಕ್ಷ ಅಶೋಕ ಚಾಗಭಾವಿ, ಮುನೇಶಪ್ಪ ತಾತಾ ನಾಗೋಲಿ, ಶರಣಗೌಡ ಸುಂಕೇಶ್ವರಹಾಳ, ಅಮರೇಶ ಇಟಗಿ, ನಾಗೇಂದ್ರ ಭೂಮನಗುಂಡ, ನರಸಪ್ಪ ಮಲ್ಲೇದೇವರಗುಡ್ಡ, ನರಸಣ್ಣ ಜೇರಬಂಡಿ, ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು, ಸಮಾಜದ ಯುವಕರು ಸಭೆಯಲ್ಲಿ ಭಾಗವಹಿಸಿದ್ದರು.

# ಜ.10 ರಂದು ಶ್ರೀ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದಿಂದ ಪದಗ್ರಹಣ ಪ್ರತಿಭಾ ಪುರಸ್ಕಾರ.




ಯುವಮಾರ್ಗ ಸುದ್ದಿ

**ಸಿಂದನೂರು,ಜ.8–**ಶ್ರೀ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಅಭಿನಂದನಾ ಸಮಾರಂಭವನ್ನು ಜನವರಿ 10 ರಂದು ಬೆಳಿಗ್ಗೆ ನಗರದ ಟೌನ್ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಅಧ್ಯಕ್ಷ ಡಾ.ಬಸವರಾಜ ಪಿ.ನಾಯಕ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಉದ್ಘಾಟನೆ ಶಾಸಕ ಹಂಪನಗೌಡ ಬಾದರ್ಲಿ, ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ, ಹಾಗೂ ಎಂಎಲ್ಸಿ ಬಸನಗೌಡ ಬಾದರ್ಲಿ, ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಗೌರವಾಧ್ಯಕ್ಷರಾದ ತಿಮ್ಮಣ್ಣ ರಾಮತ್ನಾಳ್ ಅಧ್ಯಕ್ಷತೆ ವಹಿಸಿಕೊಳ್ಳುವರು. ಕಾರಟಗಿಯ ಪ್ರಾಧ್ಯಾಪಕ ಡಾ.ಹನುಮಂತಪ್ಪ ಚಂದಲಾಪುರ ಆಶಯ ನುಡಿಗಳನ್ನ ಆಡಲಿದ್ದಾರೆ. ಕಲ್ಬುರ್ಗಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಡೊಣ್ಣೇಗೌಡರ ಪ್ರಸ್ತುತ ದಿನಮಾನದಲ್ಲಿ ವಾಲ್ಮೀಕಿ ಜನಾಂಗದ ಸ್ಥಿತಿ–ಗತಿ ಕುರಿತು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ.

ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಅಧ್ಯಕ್ಷ ಡಾ.ಬಸವರಾಜ ಪಿ.ನಾಯಕ ಪ್ರಾಸ್ತಾವಿಕ ನುಡಿಗಳನ್ನ ನುಡಿಯಲಿದ್ದಾರೆ. ಜೊತೆಗೆ ಮುಖ್ಯ ಅಥಿತಿಗಳಾದ ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಸ್ಕಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ಡಿವೈಎಸ್ಪಿ ಜಿ.ಚಂದ್ರಶೇಖರ್, ಸೇರಿದಂತೆ ಅನೇಕ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ನಂತರ ಗೌರವಾಧ್ಯಕ್ಷ ತಿಮ್ಮಣ್ಣ ರಾಮತ್ನಾಳ್ ಮಾತನಾಡಿ, ಸರಿಸುಮಾರು 200 ನೌಕರರು ಸೇರಿ, ಈ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟವನ್ನು ಹುಟ್ಟುಹಾಕಿದ್ದೇವೆ. ಶೈಕ್ಷಣಿಕವಾಗಿ ಮುಂದುವರಿಯುವ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರ, ಸೆಮಿನಾರಗಳನ್ನ ಮಾಡುವುದು. ಬಡ ಮಕ್ಕಳಿಗೆ ಸ್ಕಾಲರ್ಶಿಪ್ ಗಾಗಿ ಸರ್ಕಾರದ ಕೊಂಡಿಯಾಗಿ ಕೆಲಸ ಮಾಡುವುದು. ಹೀಗೆ ಹತ್ತು ಹಲವಾರು ಧ್ಯೇಯ ಉದ್ದೇಶ ಇಟ್ಟುಕೊಂಡು ಒಕ್ಕೂಟ ರಚಿಸಿ ನೂತನ ಪದಾಧಿಕಾರಿಗಳ ಪದಗ್ರಹಣ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದೇವೆ ಎಂದರು.

ಈ ವೇಳೆ: ಕಾರ್ಯಾಧ್ಯಕ್ಷ ವೀರೇಶ ನಾಯಕ ಕನ್ನಾರಿ, ಉಪಾಧ್ಯಕ್ಷ ಅಮರೇಶ ನಾಯಕ ಬೆಳ್ಳಿಗನೂರು, ಪ್ರಧಾನ ಕಾರ್ಯದರ್ಶಿ ಶಂಕರ ವಾಲಿಕಾರ, ಖಜಾಂಚಿ ಡಾ.ಬಸವರಾಜ ಎಲ್ ಚಿಗರಿ, ಮಾಧ್ಯಮ ಸಲಹೆಗಾರ ವೆಂಕೋಬ ನಾಯಕ ಬೂತಲದಿನ್ನಿ, ಸಾಂಸ್ಕೃತಿಕ ಕಾರ್ಯದರ್ಶಿ ತಿಮ್ಮಣ್ಣ ನಾಯಕ ಕಲ್ಮಂಗಿ, ನಾಗರಾಜ ನಾಯಕ, ಬಾಯಪ್ಪ, ಉಯಲ್ಲಾಲಿಂಗ, ಸೇರಿದಂತೆ ಅನೇಕ ಮುಖಂಡರಿದ್ದರು.

# ಕೆ.ಹಂಚಿನಾಳ ಕ್ಯಾಂಪ್ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಎಸ್.ಡಿ.ಎಮ್.ಸಿ ಆಯ್ಕೆ

ಯುವಮಾರ್ಗ ಸುದ್ದಿ

**ಸಿಂದನೂರು,ಜ.8–**ತಾಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕೆ. ಹಂಚಿನಾಳ ಕ್ಯಾಂಪ್ (ಜೆ.ಆರ್ ) ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಎಸ್.ಡಿ.ಎಮ್.ಸಿಯ ಸಭೆಯು ಶಾಲಾ ಆವರಣದಲ್ಲಿ ನಡೆಸಲಾಯಿತು ಎಂದು ಮುಖ್ಯ ಶಿಕ್ಷಕ ನಿಂಗರಾಜ ಕೊಪ್ಪದ್ ಹೇಳಿದರು.

ಸಭೆಯಲ್ಲಿ ಹಾಜರಿದ್ದ ಪೋಷಕರು, ಶಿಕ್ಷಕರ ಸಮ್ಮುಖದಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ಆಯ್ಕೆಯಲ್ಲಿ ಯಲ್ಲಪ್ಪ ತಾಯಿ ರೇಣುಕಮ್ಮರನ್ನು ಅಧ್ಯಕ್ಷರನ್ನಾಗಿ, ಯಮನಮ್ಮ ಗಂಡ ಪರಶುರಾಮರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.ನೂತನವಾಗಿ ಆಯ್ಕೆಯಾದ




ಅಧ್ಯಕ್ಷರು ಉಪಾಧ್ಯಕ್ಷರು ಮಾತನಾಡಿ, ಶಾಲೆಯ ಸರ್ವತೋಮುಖ ಅಭಿವೃದ್ಧಿ, ಮಕ್ಕಳ ಶಿಕ್ಷಣ ಗುಣಮಟ್ಟ, ಶಿಸ್ತು, ಸ್ವಚ್ಛತೆ ಹಾಗೂ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿ ಸುವುದಾಗಿ ಭರವಸೆ ನೀಡಿದರು. ಈ ವೇಳೆ ಸಹ ಶಿಕ್ಷಕರಾದ ಐನಾಪರ್ತಿ ಶ್ರೀನಿವಾಸ್, ಮುಖಂಡ 'ರಾದ ಪೆತುರ್ ಹಾಗೂ ಪರಮೇಶ್, ಪೋಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಲ್ಮಠ ಆಯುರ್ವೇದ ಕಾಲೇಜಿನಲ್ಲಿ ಷಟ್ ಕ್ರಿಯೆಗಳ ಯೋಗಾಭ್ಯಾಸ

ಯುವಮಾರ್ಗ ಸುದ್ದಿ

**ಮಾನ್ವಿ,ಜ.8–** ಸ್ಥಳೀಯ ಕಲ್ಮಠ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ವಿದ್ಯಾರ್ಥಿಗಳಿಗಾಗಿ ಇತ್ತೀಚೆಗೆ ಷಟ್ ಕ್ರಿಯೆಗಳ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ 6:30ರಿಂದ 7:30ರ ಅವಧಿಯಲ್ಲಿ ನಡೆದ ಈ ಶಿಬಿರವು ಕೆಲವು ಸರಳ ವ್ಯಾಯಾಮಗಳೊಂದಿಗೆ ಪ್ರಾರಂಭವಾಗಿ, ನಂತರ ವಿದ್ಯಾರ್ಥಿಗಳಿಗೆ ಕಪಾಲಭಾತಿ ಪ್ರಾಣಾಯಾಮ, ಅಲ್ಟರ್ನೇಟಿವ್ ಕಪಾಲಭಾತಿ ಹಾಗೂ ಬಸ್ತ್ರಿಕಾ ಕಪಾಲಭಾತಿಯ ಜೊತೆಗೆ ನಾಡಿ ಶುದ್ಧಿ ಪ್ರಾಣಾಯಾಮದ ಬಗ್ಗೆ ವಿಸ್ತಾರವಾದ ತರಬೇತಿ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯೋಗ ಗುರು ಅನ್ನದಾನಯ್ಯನವರು, ಯೋಗದ ಷಟ್ ಕ್ರಿಯೆಗಳು ಮನುಷ್ಯನ ಸ್ವಾಸ್ಥ್ಯದ ಸಂಕೇತಗಳಾಗಿವೆ ಎಂದು ತಿಳಿಸಿದರು. ವಿಶೇಷವಾಗಿ ಚಳಿಗಾಲದಲ್ಲಿ ಕಾಣಿಸಿಕೊಳ್ಳುವ ಅಲರ್ಜಿ ಮತ್ತು ಸೈನಸ್‌ನಂತಹ ಸಮಸ್ಯೆಗಳನ್ನು ಹತೋಟಿಗೆ ತರಲು ಹಾಗೂ ಅಸ್ತಮಾವನ್ನು ಪರಿಣಾಮಕಾರಿಯಾಗಿ ಎದುರಿಸಲು ಜಲ ನೇತಿ ಮತ್ತು ಸೂತ್ರ ನೇತಿ ಅಭ್ಯಾಸಗಳು ಅತ್ಯುತ್ತಮ ಫಲಿತಾಂಶವನ್ನು ನೀಡಬಲ್ಲವು ಎಂದು



ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಜೀವನೇಶ್ವರಯ್ಯ ಹಿರೇಮಠ, ಆಡಳಿತಾಧಿಕಾರಿ ಉಮಾಶಂಕರ್, ಉಪನ್ಯಾಸಕಿ ಪ್ರಿಯಾಂಕ ಹಾಗೂ ಕಾಲೇಜಿನ ಎಲ್ಲಾ ವೈದ್ಯ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

# ಉಸ್ಮಾನಿಯಾ ವಿಶ್ವವಿದ್ಯಾಲಯದ ಡೀನ್ ಆಗಿ ಕನ್ನಡಿಗ ಪ್ರೋ. ಲಿಂಗಪ್ಪ ನೇಮಕ

ಯುವಮಾರ್ಗ ಸುದ್ದಿ

**ಹೈದರಾಬಾದ್,ಜ.8–** ನೂರು ವರ್ಷಗಳ ಕಾಲ ಇತಿಹಾಸ ಇರುವ ಉಸ್ಮಾನಿಯಾ ವಿಶ್ವವಿದ್ಯಾಲ ಯದಲ್ಲಿ ಕನ್ನಡಿಗರಾದ ಕಲಬುರಗಿ ಜಿಲ್ಲೆಯ ಸುರಪುರದ ದೇವರಗೊನಾಳದ ನಿವಾಸಿಯಾ ಗಿರುವ ಪ್ರೋ ಲಿಂಗಪ್ಪ ಗೊನಾಳ ಅವರ ಸೇವೆಯನ್ನು ಪರಿಗಣಿಸಿದ ಉಪಕುಲಪತಿ ಕನ್ನಡ ವಿಭಾಗದ ಮುಖ್ಯಸ್ಥ ರಾಗಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಆರ್ಟ್ಸ್ ಕಾಲೇಜನ ಡೀನ್ ಆಗಿ ನೇಮಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಇಲ್ಲಿಯುವರೆಗೆ ಈ ಹುದ್ದೆಗೆ ಕನ್ನಡಿಗರು ಅಲಂಕರಿಸಿಲ್ಲ. ಮೊದಲನೆಯ ವ್ಯಕ್ತಿಗಳು ಪ್ರೋ ಲಿಂಗಪ್ಪ ಗೊನಾಳ ಎಂದರೆ ತಪ್ಪಾಗದು. ಇಂದು ವಿಶ್ವವಿದ್ಯಾಲಯದಲ್ಲಿ ಪ್ರೋ ಲಿಂಗಪ್ಪ ಗೊನಾಳ ಅವರಿಗೆ ಹೈದರಾಬಾದ್ ನ ಎಲ್ಲಾ ಕನ್ನಡಿಗರ ಪರವಾಗಿ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘದ ನಿಯೋಗವನ್ನು ಅವರಿಗೆ ಭೇಟಿಯಾಗಿ ಸನ್ಮಾನಿಸಿ



ಗೌರವಿಸಿದರು. ಅಧ್ಯಕ್ಷ ಧರ್ಮೇಂದ್ರ ಪೂಜಾರಿ. ಉಪಾಧ್ಯಕ್ಷ ಬಸವರಾಜ ಹಂಜನಾಳೆ. ಕೀರ್ತಿ ಕುಮಾರ ಮಾನ್ವಿಕರ. ಪ್ರಭು ಪೂಜಾರಿ. ಅಮರನಾಥ ಹಿರೋಡೆ. ರಾಜಕುಮಾರ ಮನ್ನಳಿ. ಜಗನಾಥ ತೊಂಡಾರೆ. ಮಾರುತಿ ಮೇತ್ರೆ. ಪ್ರೋ ಲಿಂಗಪ್ಪ ಗೋನಾಳ ಅವರಿಗೆ ಕನ್ನಡ ಶ್ಯಾಲು ಹೊದಿಸಿ. ಕನ್ನಡ ಪುಸ್ತಕವನ್ನು ನೀಡಿ ಶುಭ ಹಾರೈಸಿದರು.

# ದೀರ್ಘಾವಧಿ ಮುಖ್ಯಮಂತ್ರಿ ಯಾಗಿ ದಾಖಲೆ ದಾಖಲಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ವಿಶೇಷ ಪೂಜೆ ಕಾರ್ಯಕ್ರಮ

ಯುವಮಾರ್ಗ ಸುದ್ದಿ

**ರಾಯಚೂರು,ಜ.8–**ಧರ್ಮ ಗುರುಗಳಾದ ಸಾಯಿ ಕಿರಣ ಆಧೋನಿ (ಬಾಬಾ )ಅವರ ಕರ್ನಾಟಕ ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿ ಯಾಗಿ ದಾಖಲೆ ದಾಖಲಿಸಿದ ಸಿಎಂ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ಪ್ರದೇಶ ಯುವ ಕುರುಬರ ಸಂಘ ರಾಯಚೂರು ವತಿಯಿಂದ ರಾಯಚೂರು ಶ್ರೀ ಶಿರಡಿ ಸಾಯಿ ದ್ಯಾನ ಮಂದಿರದಲ್ಲಿ ವಿಶೇಷ ಪೂಜೆ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

ಈ ಸಂಧರ್ಬದಲ್ಲಿ ಕೆ ರಮೇಶ್ ಮೂಡಲದಿನ್ನಿ, ಕರ್ನಾಟಕ ಪ್ರದೇಶ ಯುವ ಕುರುಬರ ಸಂಘ ಜಿಲ್ಲಾಧ್ಯಕ್ಷರು, ಕೆ.ನರಸಣ್ಣ ಶಾಸ್ತ್ರಿ ಹುಣಸಿಹಾಳಹುಡಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು, ಕೆ.ತಿಮ್ಮಪ್ಪ ಮರ್ಚಟಹಾಳ್, ಜಿಲ್ಲಾ ಕಾರ್ಯಧ್ಯಕ್ಷರು. ಕೆ ವೀರೇಶ್ ಡಿ ರಾಂಪುರ್. ತಾಲೂಕ್ ಅಧ್ಯಕ್ಷರು. ಹನುಮೇಶ ಮರ್ಚಟಹಾಳ. ಗೂಳಪ್ಪ ವಿಷ್ಣು.



ಬೊಮ್ಮನಾಳ. ಗುರು ಪ್ರತಾಪ್ ಮಾಜಿ ಅಧ್ಯಕ್ಷರು. ಎಂ ಕೆ ಮಲ್ಲಿಕಾರ್ಜುನ್ ಮಾಜಿ ಅಧ್ಯಕ್ಷರು. ಶ್ಯಾಮ್ ಮೂರ್ತಿ ಜಿಲ್ಲಾಧ್ಯಕ್ಷರು ರಾಯಣ್ಣ ಯುವ ಗರ್ಜನೆ ರಾಯಚೂರು . ನವೀನ್ ಕುಮಾರ್. ಲಕ್ಷ್ಮಣ ದಾರಿ ಮನೆ. ಮೈಲಾರಿ. ಅಂಬರೀಶ ಗದರ್. ಈರಣ್ಣ ಜೆ ಮಲ್ಲಪುರ್. ಮಲ್ಲರೆಡ್ಡಿ ಗೌಡ ಮರ್ಚಟಹಾಳ್. ವೆಂಕಟೇಶ ಮರ್ಚಟಹಾಳ್. ಇನ್ನು ಮುಂತಾದವರು ಪೂಜ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು

# ಪಟ್ಟಣ ಪಂಚಾಯತಿಗೆ ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ: ದಾಖಲೆಗಳ ಪರಿಶೀಲನೆ

ಯುವಮಾರ್ಗ ಸುದ್ದಿ

**ಸಿರವಾರ, ಜ.08–** ಲೋಕಾಯುಕ್ತ ಅಧಿಕಾರಿಗಳು ಬುಧವಾರ ಸಂಜೆ ಸಿರವಾರ ಪಟ್ಟಣ ಪಂಚಾಯತಿಗೆ ದಿಢೀರ್ ಭೇಟಿ ನೀಡಿ ವಿವಿಧ ದಾಖಲೆಗಳ ಪರಿಶೀಲನೆ ನಡೆಸಿದರು. ಸಾರ್ವಜನಿಕರಿಗೆ ಒದಗಿಸುತ್ತಿರುವ ಸರ್ಕಾರಿ ಸೇವೆಗಳು, ಎ–ಖಾತಾ, ಬಿ–ಖಾತಾ ವಿತರಣೆ, ಪೌರಾಕಾರ್ಮಿಕರ ಸೇವೆ, ಸಕಾಲದಲ್ಲಿ ಅರ್ಜಿಗಳ ವಿಲೇವಾರಿ, ಕುಡಿಯುವ ನೀರು ಪೂರೈಕೆ, ತ್ಯಾಜ್ಯ ವಿಲೇವಾರಿ ವಾಹನಗಳ ನಿರ್ವಹಣೆ, ಶೌಚಾಲಯ, ತೆರಿಗೆ ಸಂಗ್ರಹ ಸೇರಿದಂತೆ ಇನ್ನಿತರೆ ಮಹತ್ವದ ದಾಖಲೆಗಳನ್ನು ಪರಿಶೀಲನೆ ನಡೆಸಿದರು.

ಸಾರ್ವಜನಿಕರಿಗೆ ಉಚಿತವಾಗಿ ಸೇವೆಗಳನ್ನು ಒದಗಿಸುವುದಕ್ಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಯಾವುದೇ ಲಂಚ ಕೇಳುವುದು,



ಹಣಕ್ಕೆ ಬೇಡಿಕೆ ಇಡುವ ವಿಷಯಕ್ಕೆ ಸಂಬಂಧಿಸಿ ಪಟ್ಟಣ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೊಬೈಲ್ ಫೋನ್'ಗಳನ್ನು ಪರಿಶೀಲನೆ ಮಾಡಿದ್ದಾರೆ. ದಾಖಲೆಗಳ ಪರಿಶೀಲನೆ ವೇಳೆ ಏನೇ ಲೋಪದೋಷಗಳು ಕಂಡು ಬಂದರೇ ಅಂಥಹ ದಾಖಲೆಗಳನ್ನು ಪಡೆದುಕೊಂಡು ಬೆಂಗಳೂರಿನ ಕೇಂದ್ರ ಕಚೇರಿಗೆ ಸಲ್ಲಿಸಿ ವಿಚಾರಣೆ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಲೋಕಾಯುಕ್ತ ಡಿವೈಎಸ್ಪಿ ಭರತ್ ರೆಡ್ಡಿ ಬೆಳಗಾವಿ, ಪಿಐ ರಾಜಶೇಖರಯ್ಯ ಬೆಂಗಳೂರು, ಪ್ರಕಾಶ್, ನಾಗಣ್ಣ ಪೂಜಾರಿ, ಶಂಕರ್ ಹಾಗೂ ಪ.ಪಂ.ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸಮುದಾಯ ಸಂಘಟನಾ ಅಧಿಕಾರಿ ಹಂಪಯ್ಯ ಪಾಟೀಲ್, ಜೆಇ ಸೈಯದ್ ಮೊಹಮ್ಮದ್ ಹಸನ್ ಸೇರಿದಂತೆ ಸಿಬ್ಬಂದಿಗಳು ಇದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H